## STATE LEVEL SSLC PREPARATORY EXAMINATION, FEBRUARY - 2020

**ರಾಜ್ಯ ಮಟ್ಟದ ಎಸ್.ಎಸ್.ಎಲ್.ಸಿ. ಪೂರ್ವಸಿದ್ಧತಾ ಪರೀಕ್ಷೆ, ಫೆಬ್ರವರಿ – 2020**

**ಸಂಕೇತ ಸಂಖ್ಯೆ : 01-K** **Code No. : 01-K**

**ವಿಷಯ : ಪ್ರಥಮ ಭಾಷೆ – ಕನ್ನಡ**

Subject : First Language - KANNADA

ಗರಿಷ್ಠ ಅಂಕಗಳು : 100 ] [ Max. Marks : 100

# ಮಾದರಿ ಉತ್ತರ ಪತ್ರಿಕೆ

---

**I. ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಂದಿಗೆ ಬರೆಯಿರಿ** 6 X 1 =6

1. 'ದಿಗಂತ' ಪದವು ಈ ಸಂಧಿಗೆ ಉದಾಹರಣೆಯಾಗಿದೆ ;

(ಎ) ಆದೇಶ ಸಂಧಿ (ಬಿ) ಗುಣ ಸಂಧಿ

(ಸಿ) ಜಶ್ತ್ವ ಸಂಧಿ (ಡಿ) ಅನುನಾಸಿಕ ಸಂಧಿ

**ಉತ್ತರ: (ಸಿ) ಜಶ್ತ್ವ ಸಂಧಿ**

2. ಒಂದು ಪದವನ್ನೋ, ವಾಕ್ಯವನ್ನೇ ಹೇಳಿ ಅದಕ್ಕೆ ಸಮಾನಾರ್ಥಕ ಪದವನ್ನೋ, ವಾಕ್ಯವನ್ನೋ ಹೇಳುವಾಗ ಈ ಚಿಹ್ನೆಯನ್ನು ಬಳಸಲಾಗುತ್ತದೆ.

(ಎ) ಅರ್ಧವಿರಾಮ (ಬಿ) ಆವರಣ

(ಸಿ) ಉದ್ಧರಣ (ಡಿ) ಅಲ್ಪವಿರಾಮ

**ಉತ್ತರ: (ಬಿ) ಆವರಣ**

3. ರೂಢನಾಮಪದಕ್ಕೆ ಉದಾಹರಣೆಯಾದ ಪದವಿದು ;

(ಎ) ನದಿ (ಬಿ) ವಿಜ್ಞಾನಿ

(ಸಿ) ಕುರುಡ (ಡಿ) ಶಂಕರ

**ಉತ್ತರ: (ಎ) ನದಿ**

4. ‘ಗಿರಿವನದುರ್ಗಗಳು’ ಪದದಲ್ಲಿರುವ ಸಮಾಸ ;

(ಎ) ತತ್ಪುರುಷ ಸಮಾಸ (ಬಿ) ದ್ವಂದ್ವ ಸಮಾಸ

(ಸಿ) ದ್ವಿಗು ಸಮಾಸ (ಡಿ) ಬಹುವ್ರೀಹಿ ಸಮಾಸ

**ಉತ್ತರ: (ಬಿ) ದ್ವಂದ್ವ ಸಮಾಸ**

5. ಕಾರವಾರದಲ್ಲಿ ಮಲೇರಿಯಾ ಹಬ್ಬಿತ್ತು; ಆದರಿಂದ ವೀರೇಶ್ವರ ಪಾಠಕ್‌ರವರು ಮಲೇರಿಯಾದಿಂದ ಬಳಲಬೇಕಾಯಿತು. – ಈ ವಾಕ್ಯವು

(ಎ) ಸಾಮಾನ್ಯ ವಾಕ್ಯ (ಬಿ) ಸಂಯೋಜಿತ ವಾಕ್ಯ

(ಸಿ) ಮಿಶ್ರವಾಕ್ಕೆ (ಡಿ) ಪ್ರಶ್ನಾರ್ಥಕ ವಾಕ್ಯ

**ಉತ್ತರ: (ಬಿ) ಸಂಯೋಜಿತ ವಾಕ್ಯ**

6. ಸಂಬಂಧಾರ್ಥಕಾವ್ಯಯಕ್ಕೆ ಉದಾಹರಣೆಯಾದ ಪದವಿದು ;

(ಎ) ಚೆನ್ನಾಗಿ (ಬಿ) ಸಾಕು

(ಸಿ) ಸುಯ್ಯನೆ (ಡಿ) ಅಥವಾ

**ಉತ್ತರ: (ಡಿ) ಅಥವಾ**

**II. ಈ ಕೆಳಗಿನವುಗಳಲ್ಲಿ ಮೊದಲೆರಡು ಪದಗಳಿಗಿರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿ ಹೊಂದುವ ಸಂಬಂಧೀ ಪದವನ್ನು ಬರೆಯಿರಿ :** 4 X 1 = 4

7. ವಂಧಾ : ಬಂಜೆ :: ವ್ಯಯ : **ಬೀಯ**

8. ಆಮಾನತು : ಅರಬ್ಬಿ :: ಬಂದೂಕು : **ಉರ್ದು**

9. ಕೃತ್ರಿಮ : ಮೋಸ :: ಕೂರ್ಮೆ : **ಸ್ನೇಹ , ಗೆಳೆತನ**

10. ಸಿರಿತನ : ತದ್ಧಿತಾಂತ ಭಾವನಾಮ :: ಅಂಜಿಕೆ : **ಕೃದಂತಭಾವ ನಾಮ**

**III. ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ :** 7 X 1 = 7

11. ಶ್ರೀರಾಮನಿಗೆ ಸಮರ್ಪಿಸಲು ಶಬರಿ ಏನೇನನ್ನು ಸಂಗ್ರಹಿಸಿದ್ದಳು ?

**ಉತ್ತರ:** ಶ್ರೀರಾಮನಿಗೆ ಸಮರ್ಪಿಸಲು ಶಬರಿ ಪರಿಮಳದ ಹೂವು, ರುಚಿಕರವಾದ ಹಣ್ಣುಹಂಪಲುಗಳು ಮತ್ತು ಮಧುಪರ್ಕ ಎಂಬ ಪಾನಿಯವನ್ನು ಸಂಗ್ರಹಿಸಿದ್ದಳು.

12. ಆಂಗ್ಲರ ಸಾಮ್ರಾಜ್ಯ ವೈಭವವು ಲಂಡನ್ನಿನ ಯಾವ ಓಣಿಯಲ್ಲಿ ಕಂಡುಬರುತ್ತದೆ ?

**ಉತ್ತರ:** ಆಂಗ್ಲರ ಸಾಮ್ರಾಜ್ಯ ವೈಭವವು ಲಂಡನ್ನಿನ ಚೇರಿಂಗ್ ಕ್ರಾಸ್ ಓಣಿಯಲ್ಲಿ ಕಂಡುಬರುತ್ತದೆ.

13. ಶಾನುಭೋಗರು ಚಿಕ್ಕನಾಯಕನಹಳ್ಳಿಗೆ ಏಕೆ ಹೋಗಿದ್ದರು ?

**ಉತ್ತರ:** . ಶಾನುಭೋಗರು ಚಿಕ್ಕನಾಯಕನಹಳ್ಳಿಗೆ ಇರಸಾಲಿಗೆ(ಕಂದಾಯದ ಹಣ ಕಟ್ಟಲು) ಹೋಗಿದ್ದರು.

14. ದುಷ್ಟಬುದ್ದಿಯ ತಂದೆಯ ಹೆಸರೇನು ?

**ಉತ್ತರ:** ದುಷ್ಟಬುದ್ದಿಯ ತಂದೆಯ ಹೆಸರು ಪ್ರೇಮಮತಿ.

15. ಹಕ್ಕಿ ಯಾವ ವೇಗದಲ್ಲಿ ಹಾರುತ್ತಿದೆ ?

**ಉತ್ತರ:** ಹಕ್ಕಿ ಎವೆ ತೆರೆದಿಕ್ಕುವ ಹೊತ್ತಿನ ಒಳಗೆ ಗಾವುದ ಗಾವುದ ವೇಗದಲ್ಲಿ ಹಾರುತ್ತಿದೆ.

10. ದ್ರೋಣನು ತನ್ನ ಮಗನಾದ ಅಶ್ವತಾಮನೊಡಗೂಡಿ ಯಾರ ಬಳಿಗೆ ಬಂದನು ?

**ಉತ್ತರ:** ದ್ರೋಣನು ತನ್ನ ಮಗನಾದ ಅಶ್ವತಾಮನೊಡಗೂಡಿ ಪರುಶುರಾಮರ ಬಳಿಗೆ ಬಂದನು.

17. ಕವಯಿತ್ರಿ ವಿಜಯಶ್ರೀ ಸಬರದ ಅವರ ಪ್ರಕಾರ ಒಡೆಯನ ಅಂಗಳದಲ್ಲಿ ಮಾವಿನ ಮರಗಳು ಹೇಗೆ ನಿಂತಿವೆ ?

**ಉತ್ತರ:** ಕವಯಿತ್ರಿ ವಿಜಯಶ್ರೀ ಸಬರದ ಅವರ ಪ್ರಕಾರ ಒಡೆಯನ ಅಂಗಳದಲ್ಲಿ ಮಾವಿನ ಮರಗಳು ಮೈ ತುಂಬಿ ನಿಂತವೆ.

**IV. ಈ ಕೆಳಗಿನ ಪ್ರಶ್ನೆಗಳಿಗೆ ಮೂರು ಅಥವಾ ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ :** 10x2=20

18. ಆಂಗ್ಲರು ಹೆಣ್ಣು ಮಕ್ಕಳನ್ನು ಸತ್ಕರಿಸುವ ಪರಿಯನ್ನು ಲೇಖಕರು ಹೇಗೆ ವ್ಯಕ್ತಪಡಿಸಿದ್ದಾರೆ ?

**ಉತ್ತರ:** ಆಂಗ್ಲರು ಹೆಣ್ಣು ಮಕ್ಕಳನ್ನು ಲಂಡನ್ನಿನ ಉಪಹಾರಗೃಹಗಳಲ್ಲಿ ಮಾಣಿಗಳಾಗಿ, ದೊಡ್ಡ ದೊಡ್ಡ ಅಂಗಡಿಗಳಲ್ಲಿ ಟೈಪಿಸ್ಟ್ ಆಗಿ, ಕಾರಕೂನರಾಗಿ (ಗುಮಾಸ್ತರು), ಹಾಗೂ ಸಿನಿಮಾ ಗೃಹದಲ್ಲಿ ಪ್ರೇಕ್ಷಕರಿಗೆ ಜಾಗವನ್ನು ಹುಡುಕಿಕೊಡುವ ಕೆಲಸದಲ್ಲಿ ನಿಯುಕ್ತಗೊಳಿಸಿ ಸತ್ಕರಿಸುತ್ತಾರೆ ಎಂದು ಲೇಖಕರು ವ್ಯಕ್ತಪಡಿಸಿದ್ದಾರೆ.

19. ಹುಲಿಯು ಹಿಂದಿನಿಂದ ಹಾರಿ ಕೊಲ್ಲದಿರಲು ಕಾರಣಗಳೇನು ?

**ಉತ್ತರ:** ಭರತಖಂಡದ ಹುಲಿಗಳ ಧರ್ಮಶ್ರದ್ಧೆಯನ್ನು ಅನುಸರಿಸಿ ಬೇಟೆಯಾಡುತ್ತವೆ. ಯಾವ ನಾಡಿನಲ್ಲಿ ಶ್ರೀರಾಮನಂಥ ದೊರೆಗಳು ಆಳಿದರೋ, ಮಹರ್ಷಿ ವೇದವ್ಯಾಸರಿಂದ ರಚಿತವಾದ ಭಗದ್ಗೀತೆಯಂಥ ಗ್ರಂಥ ಉದ್ಭವಿಸಿತೋ, ಇಂತಹ ಈ ಭರತ ಭೂಮಿಯಲ್ಲಿ ಜನಿಸಿದ ಹುಲಿಗಳು ಅಧರ್ಮದಿಂದ ನಡೆದುಕೊಳ್ಳುವುದಿಲ್ಲ. ಯಾರನ್ನೇ ಆಗಲಿ, ಭರತಖಂಡದ ಹುಲಿಗಳು ಹಿಂದಿನಿಂದ ಹಾರಿ ಕೊಲ್ಲುವುದಿಲ್ಲ. ಶತ್ರುವನ್ನಾದರೂ ಸರಿಯೆ, ಆತ ಬೆನ್ನು ತಿರುಗಿಸಿರುವಾಗ ಕೊಲ್ಲುವುದು ಧರ್ಮವಲ್ಲ. ಆದ್ದರಿಂದ ಇವುಗಳು ಹುಲಿಯು ಹಿಂದಿನಿಂದ ಹಾರಿ ಕೊಲ್ಲದಿರಲು ಕಾರಣಗಳಾಗಿವೆ.

20. ಅರಸ ವೃಷಭಾಂಕನು ಆಶ್ಚರ್ಯಗೊಳ್ಳಲು ಕಾರಣವೇನು ?

**ಉತ್ತರ:** ವೃಷಭಾಂಕ ಅರಸನು ಕೊಂಡುಕೊಳ್ಳಲಾಗದ ರತ್ನಗಂಬಳಿಗಳನ್ನು ಸುಕುಮಾರ ಸ್ವಾಮಿಯ ತಾಯಿ ಯಶೋಭದ್ರೆ ಖರೀದಿಸಿದಳು. ಅವುಗಳನ್ನು ಮೂವತ್ತೆರಡು ತುಂಡುಗಳನ್ನಾಗಿ ಮಾಡಿ ಸೊಸೆಯಂದಿರಿಗೆ ನೀಡಿದಳು. ಅವರು ಅವುಗಳನ್ನು ಚಪ್ಪಲಿಗಳಿಗೆ ಸಿಕ್ಕಿಸಿಕೊಂಡರು. ಈ ಸಂಗತಿಯನ್ನು ತಿಳಿದು ವೃಷಭಾಂಕನು ಆಶ್ಚರ್ಯಪಟ್ಟನು.

21. ಯಶೋಭದ್ರೆಯು ಅರಸನ ಆಗಮನಕ್ಕಾಗಿ ಹೇಗೆ ಸಿದ್ಧತೆಯನ್ನು ಮಾಡಿಕೊಂಡಳು ?

**ಉತ್ತರ:** ಯಶೋಭದ್ರೆ ಅರಸರು ಬರುವ ದಾರಿಯಲ್ಲೆಲ್ಲ ಪಂಚರತ್ನಗಳಿಂದ ರಂಗೋಲಿಯನ್ನು ಇಟ್ಟು ನೇತ್ರ, ಪಟ್ಟು, ದುಕೂಲ, ಚೀನಾದಿ ದಿವ್ಯವಾದ ವಸ್ತ್ರಗಳನ್ನು ಹಾಸಿ, ರತ್ನ ಮಣಿಗಳಿಂದ ಶೋಭಿಸುವ ಚಿನ್ನದ ಮುಕ್ತಹಾರಗಳಿಂದ ತೋರಣವನ್ನು ಕಟ್ಟಿಸಿ ಅರಸನ ಆಗಮನಕ್ಕಾಗಿ ಸಿದ್ಧತೆಯನ್ನು ಮಾಡಿಕೊಂಡಳು.

22. ಕೃಷ್ಣನು ಕರ್ಣನ ಮನದಲ್ಲಿ ಯಾವ ರೀತಿಯಲ್ಲಿ ಭಯವನ್ನು ಬಿತ್ತಿದನು ?

**ಉತ್ತರ:** ಕೃಷ್ಣನು, "ಕರ್ಣ ನಿಮ್ಮೊಳಗೆ (ಪಾಂಡವರು) ಯಾದವರೊಳಗೆ, ಕೌರವರೊಳಗೆ ಯಾವುದೇ ವ್ಯತ್ಯಾಸ ಇಲ್ಲ. ವಂಶವನ್ನು ಪ್ರತಿಪಾದಿಸಿ ಹೇಳುವುದಾದರೆ ಮೊದಲೆರಡಿಲ್ಲ. ನಿನ್ನಾಣೆಗೂ ನೀನು ಈ ಭೂಮಿಯ ಒಡೆಯ, ನಿನ್ನ ಮನಸ್ಸಿನಲ್ಲಿ ಇದರ ಅರಿವು ಯಾವುದು ಇಲ್ಲ." ಎನ್ನುತ್ತ ಭಯವನ್ನು ಬಿತ್ತಿದನು.

23. ಕೃಷ್ಣನು ಆಮಿಷಗಳನ್ನು ಒಡ್ಡಿದಾಗ ಕರ್ಣನ ಮನದಲ್ಲಿ ಮೂಡಿದ ಭಾವನೆಗಳೇನು ?

**ಉತ್ತರ:** ಕೃಷ್ಣನು ಆಮಿಷಗಳನ್ನು ಒಡ್ಡಿದಾಗ ಕರ್ಣನ ಮನದಲ್ಲಿ "ಅಯ್ಯೋ ಕುರುಪತಿಗೆ ಕೇಡಾಯಿತಲ್ಲಾ, ಕೃಷ್ಣನ ವೈರತ್ವದ ಬೆಂಕಿ (ಸಿಟ್ಟು) ಹೊರಗೆ ತೋರದೆ, ಸುಡದೆ (ಕೌರವನ ವಂಶವನ್ನು ನಾಶಮಾಡದೆ) ಸುಮ್ಮನೆ ಬಿಡುವುದೇ, ತನ್ನ ವಂಶವನ್ನು ತಿಳಿಸಿ ನನ್ನನ್ನು ಕೊಂದು ಹಾಕಿದನು ಮುಂದೇನು ಮಾತಾನಾಡುವುದು" ಎಂಬ ಭಾವನೆಗಳು ಮೂಡಿದವು.

24. ಶೂದ್ರರು, ಅಸ್ಪೃಶ್ಯರ ಬಗ್ಗೆ ಸ್ವಾಮಿ ವಿವೇಕಾನಂದರ ಅಭಿಪ್ರಾಯವೇನು ?

**ಉತ್ತರ:** ಶೂದ್ರರು, ಅಸ್ಪೃಶ್ಯರು ಜಾತಿ ವ್ಯವಸ್ಥೆಯ ಕ್ರೌರ್ಯಕ್ಕೆ ತುತ್ತಾಗಿದ್ದಾರೆ. ಇದರಿಂದ ಅವರು ಸ್ವಾತಂತ್ರ್ಯಹೀನರಾಗಿ ಗುಲಾಮತನ ಅನುಭವಿಸುತ್ತಿದ್ದಾರೆ. ಆದ್ದರಿಂಥ ಶೂದ್ರವರ್ಗ ತನ್ನ 'ಊಳಿಗ ಸ್ವಭಾವ'ವನ್ನು ಬಿಟ್ಟು ಹೊರಬರಬೇಕೆಂದು ಕರೆಕೊಡುತ್ತಾ, ಮುಂದೊಮ್ಮೆ ಶೂದ್ರರು ತಮ್ಮ ಶೂದ್ರತ್ವದ ಶಕ್ತಿಯಿಂದಲೇ ಮೇಲೇಳುವ ಕಾಲಬರುತ್ತದೆ ಎಂಬ ಅಭಿಪ್ರಾಯಪಟ್ಟಿದ್ದಾರೆ.

25. ಭಗತ್‌ಸಿಂಗ್ ತನ್ನ ಸಹಚರರೊಡನೆ ವೀರಯೋಧನಾಗಿ ಅಮರನಾದುದು ಹೇಗೆ ತಿಳಿಸಿ.

**ಉತ್ತರ:** ಭಗತ್‌ಸಿಂಗ್ ಜಲಿಯನ್ ವಾಲಾಬಾಗಿನ ಘಟನೆಯಿಂದ ಆಕ್ರೋಶಿತನಾಗಿ ಕ್ರಾಂತಿಕಾರಿ ಗುಂಪಿನ ಸಹಾಯದಿಂದ ಬ್ರಿಟಿಷ್ ಸರ್ಕಾರದ ವಿರುದ್ಧ ತನ್ನ ಸೇಡನ್ನು ತೀರಿಸಿಕೊಳ್ಳುತ್ತಾನೆ. ಇದರ ಫಲವಾಗಿ ತನ್ನ ಸಹಚರರಾದ ಸುಖ್‌ದೇವ್, ರಾಜ್‌ಗುರು, ಭಟುಕೇಶ್ವರ ದತ್ತರೊಂದಿಗೆ ಮರಣ ದಂಡನೆಗೆ ಈಡಾಗಿ ಹಸನ್ಮುಖಿಯಾಗಿ ತಾಯಿ ಭಾರತಾಂಬೆಯ ಸ್ವಾತಂತ್ರ್ಯದ ಹಣತೆಗೆ ತೈಲವೆಂಬಂತೆ ವೀರಯೋಧನಾಗಿ ಅಮರನಾಗಿತ್ತಾನೆ.

26. ಭಯದಿಂದಲೇ ಪ್ರವೇಶಿಸಿದ ಸುಂದರಿಗೆ ಅರಮನೆ ಮತ್ತು ಮೃಗ ಹೇಗೆ ಕಂಡುಬಂದವು ?

**ಉತ್ತರ:** ಸುಂದರಿ ಅರಮನೆಯನ್ನು ಭಯದಿಂದಲೇ ಪ್ರವೇಶಿಸಿದಾಗ ಅಲ್ಲಿ ಸುಂದರಿಯ ನೆಚ್ಚಿನ ಪುಸ್ತಕ ಭಂಡಾರವಿದ್ದಿತು. ಸಂಗೀತದ ಇಂಪಿತ್ತು. ಮೃಗವಾದರೂ ಭೀಕರವಾಗಿತ್ತು. ಕೋರೆ ಹಲ್ಲು, ಹಂದಿಯ ದೇಹ, ತೋಳದ ಚಲನೆಯನ್ನು ಪಡೆದಿದ್ದ ಮೃಗ ಕರ್ಕಶ ಸದ್ದು, ಗೊಗ್ಗರು ಧ್ವನಿಯೊಂದಿಗೆ ಅವಳನ್ನು ದಿಟ್ಟಿಸಿ ನೋಡುತ್ತಾ, "ನೀನು ಸಂತೋಷದಿಂದ ಬಂದೆಯಾ?" ಎಂದು ಕೇಳಿದ ಸನ್ನಿವೇಶಗಳು ಕಂಡುಬಂದವು.

27. 'ಗರಕೇಯ ಹುಲ್ಲು' ಎಂಬ ಉತ್ತರ ಬರುವ ಒಗಟಿನ ವಿಶೇಷತೆಯನ್ನು ತಿಳಿಸಿ.

**ಉತ್ತರ:** ಗರಿಕೆಯ ಹುಲ್ಲು ಬೆಳೆಗಳಲ್ಲಿನ ಕಳೆ ಸಸ್ಯ. ತೇವಾಂಶ ಇದ್ದ ಕಡೆ ಬೇಗನೆ ಚಿಗುರುತ್ತದೆ. ಇಂತಹ ಗರಕೆಯ ಹುಲ್ಲು ಹೊಲದಲ್ಲಿ ಹುಟ್ಟಿ ಹೊಲದಲ್ಲಿ ಬೆಳೆದು, ಬೆಳೆಗಳಿಗೆ ಅಡ್ಡಿ ಮಾಡುತ್ತಾ ಇತರೆ ಬೆಳೆಗಳನ್ನು ಬೆಳೆಯಲು ಬಿಡುವುದಿಲ್ಲ. ಆದ್ದರಿಂದ ಜನಪದರು ಇದನ್ನು ಹೊಲದಲ್ಲಿ ಹುಟ್ಟಿ ಹೊಲದಲ್ಲಿ ಬೆಳೆದು ಹೊಲ ಉಳುವ ರೈತನನ್ನು ಕಂಡು ನಗುವುದು ಎಂದು ಒಗಟಿನಲ್ಲಿ ವಿವರಿಸಲಾಗಿದೆ.

**V. ಈ ಕೆಳಗಿನ ಕವಿಗಳ / ಸಾಹಿತಿಗಳ ಸ್ಥಳ, ಕಾಲ, ಕೃತಿ ಮತ್ತು ಬಿರುದು / ಪ್ರಶಸ್ತಿಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯಿರಿ :** 2 x 3 = 6

28. **ಸಾರಾ ಅಬೂಬಕ್ಕರ್ :** ಶ್ರೀಮತಿ ಸಾರಾ ಅಬೂಬಕ್ಕರ್ ಅವರು **ಕ್ರಿ.ಶ. 1936** ರಂದು **ಕಾಸರಗೋಡು** ಎಂಬ ಊರಿನಲ್ಲಿ ಜನಿಸಿದರು. ಇವರು ಇಂದು ನಾಡಿನ ಖ್ಯಾತ ಕತೆಗಾರ್ತಿ ಹಾಗೂ ಕಾದಂಬರಿಗಾರ್ತಿಯಾಗಿ ಜನಪ್ರಿಯತೆ ಗಳಿಸಿದ್ದಾರೆ.

**ಚಂದ್ರಗಿರಿಯ ತೀರದಲ್ಲಿ, ಸಹನಾ, ಕದನ ವಿರಾಮ, ವಜ್ರಗಳು, ಸುಳಿಯಲ್ಲಿ ಸಿಕ್ಕವರು, ತಳ ಒಡೆದ ದೋಣಿಯಲ್ಲಿ** ಇತ್ಯಾದಿ ಪ್ರಮುಖ ಕಾದಂಬರಿಗಳು, ಹಾಗೂ **ಚಪ್ಪಲಿಗಳು, ಖೆಡ್ಡಾ, ಅರ್ಧರಾತ್ರಿಯಲ್ಲಿ ಹುಟ್ಟಿದ ಕೂಸು, ಪಯಣ** ಮುಂತಾದ ಕಥಾ ಸಂಕಲನಗಳನ್ನು ಬರೆದಿದ್ದಾರೆ.

ಇವರ ಸಾಹಿತ್ಯ ಕೃಷಿಗಾಗಿ ಕನ್ನಡ ಸಾಹಿತ್ಯ ಪರಿಷತ್ತಿನ **'ನೃಪತುಂಗ ಪ್ರಶಸ್ತಿ'** ಲಭಿಸಿದೆ.

29. **ಲಕ್ಷ್ಮೀಶ :** ಕವಿ ಲಕ್ಷ್ಮೀಶ **ಕ್ರಿ.ಶ.1550** ರಲ್ಲಿ ಚಿಕ್ಕಮಗಳೂರು ಜಿಲ್ಲೆಯ ಕಡೂರು ತಾಲೂಕಿನ **ದೇವನೂರಿನಲ್ಲಿ** ಜನಿಸಿದನು.

ಈತನಿಗೆ ಲಕ್ಷ್ಮೀರಮಣ, ಲಕ್ಷ್ಮೀಪತಿ ಎಂಬ ಹೆಸರುಗಳೂ ಇವೆ. **" ಜೈಮಿನಿಭಾರತ "** ವೆಂಬ ಪ್ರಸಿದ್ಧ ಕೃತಿಯನ್ನು ಬರೆದಿದ್ದಾನೆ.

ಲಕ್ಷ್ಮೀಶ ಕವಿಗೆ **ಉಪಮಾಲೋಲ, ಕರ್ಣಾಟಕವಿ ಚೂತವನಚೈತ್ರ** – ಎಂಬ ಬಿರುದುಗಳಿವೆ.

**VI. ಈ ಕೆಳಗಿನ ಪದ್ಯಭಾಗಕ್ಕೆ ಪ್ರಸಾರ ಹಾಕಿ, ಗಣ ವಿಭಾಗ ಮಾಡಿ, ಛಂದಸ್ಸಿನ ಹೆಸರನ್ನು ಬರೆಯಿರಿ :** 1 x 3 = 3

30.

| | | |
|---|---|---|
| 4 | 4 | 4 |
| – U U | U–U | – U U |
| ಬೇಡ ನಿ | ನಗೇಕೆ | ಸಾಹಸ |

| | | | | |
|---|---|---|---|---|
| 4 | 4 | 4 | 4 | 4 |
| – – | U U– | U – U | –UU | U U – |
| ದಾಡಂ | ಬರಮೆ | ನ್ನೊಳಾಹ | ವಕ್ಕನು | ಗುಣನಂ |

ಈ ಮೇಲಿನ ಪದ್ಯವು ಕಂದಪದ್ಯದ ಲಕ್ಷಣವನ್ನೊಳಗೊಂಡಿದೆ ಆದ್ದರಿಂದ **ಕಂದಪದ್ಯ** ಛಂದಸ್ಸಾಗಿದೆ.

**VII. ಈ ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ, ಲಕ್ಷಣ ಬರೆದು, ಸಮನ್ವಯಗೊಳಿಸಿ :** 1 x 3 = 3

31. ಆತನು ಪರೀಕ್ಷೆಯಲ್ಲಿ ಪ್ರಥಮ ಸ್ಥಾನ ಪಡೆದು ಉತ್ತೀರ್ಣನಾದನು. ಬುದ್ಧಿವಂತರಾದ ಮಕ್ಕಳಿಗೆ ಪರೀಕ್ಷೆಯೊಂದು ಲೆಕ್ಕವೇ?

**ಅಲಂಕಾರ:– ಅರ್ಥಾಂತರನ್ಯಾಸಾಲಂಕಾರ.**

**ಉಪಮೇಯ:–** ಆತನು ಪರೀಕ್ಷೆಯಲ್ಲಿ ಪ್ರಥಮಸ್ಥಾನ ಪಡೆದು ಉತ್ತೀರ್ಣನಾದನು. **(ವಿಶೇಷವಾಕ್ಯ)**

**ಉಪಮಾನ:–** ಬುದ್ಧಿವಂತರಾದ ಮಕ್ಕಳಿಗೆ ಪರೀಕ್ಷೆಯೊಂದು ಲೆಕ್ಕವೇ? **(ಸಾಮಾನ್ಯ ವಾಕ್ಯ)**

**ಸಮನ್ವಯ:–** ಇಲ್ಲಿ ಉಪಮೇಯವಾದ **'**ಆತನು ಪರೀಕ್ಷೆಯಲ್ಲಿ ಪ್ರಥಮಸ್ಥಾನ ಪಡೆದು ಉತ್ತೀರ್ಣನಾದನು**'** ಎಂಬ ವಿಶೇಷವಾಕ್ಯವನ್ನು ಉಪಮಾನವಾದ **'**ಬುದ್ಧಿವಂತರಾದ ಮಕ್ಕಳಿಗೆ ಪರೀಕ್ಷೆಯೊಂದು ಲೆಕ್ಕವೇ?**'** ಎಂಬ ಸಾಮಾನ್ಯ ವಾಕ್ಯದಿಂದ ಸಮರ್ಥಿಸಲಾಗಿದೆ.

**ಲಕ್ಷಣ:–** ಒಂದು ವಿಶೇಷವಾಕ್ಯವನ್ನು ಸಾಮಾನ್ಯ ವಾಕ್ಯದಿಂದ ಅಥವಾ ಸಾಮಾನ್ಯ ವಾಕ್ಯವನ್ನು ವಿಶೇಷವಾಕ್ಯದಿಂದ ಸಮರ್ಥನೆ ಮಾಡುವುದೇ **ಅರ್ಥಾಂತರನ್ಯಾಸಾಲಂಕಾರ** ವೆನಿಸುತ್ತದೆ.

**VIII. ಈ ಕೆಳಗಿನ ಗಾದೆಗಳಲ್ಲಿ ಯಾವುದಾದರೂ ಒಂದನ್ನು ಗಾದೆಯ ಮಹತ್ವದೊಂದಿಗೆ ವಿಸ್ತರಿಸಿ ಬರೆಯಿರಿ : 1 x 3 = 3**

32. **ಶಕ್ತಿಗಿಂತ ಯುಕ್ತಿ ಮೇಲು**

ಗಾದೆ ವೇದಗಳಿಗೆ ಸಮಾನ , ಗಾದೆ ಹಿರಿಯರು ಮತ್ತು ಜನಪದರ ಜೀವನದ ಅನುಭವದ ನುಡಿಮುತ್ತುಗಳು. ಗಾದೆಗಳು ಆಕಾರದಲ್ಲಿ ವಾಮನನಾದರೂ ಅರ್ಥದಲ್ಲಿ ತ್ರಿವಿಕ್ರಮನಂತೆ. ಗಾದೆಗಳು ಜೀವನದನುಭವಕ್ಕೆ ಹಿಡಿದ ಕನ್ನಡಿಯಾಗಿವೆ. ಆದುದರಿಂದ ಗಾದೆಗಳು ಸತ್ಯಕ್ಕೆ ಬಹಳ ಹತ್ತಿರವಾಗಿವೆ. **ಶಕ್ತಿಗಿಂತ ಯುಕ್ತಿ ಮೇಲು** ಎಂಬ ಈ ಮೇಲಿನ ಗಾದೆಯು ಪ್ರಸಿದ್ಧವಾಗಿದೆ.

"**ಚತುರನ ಯುಕ್ತಿಯು ಸಾವಿರಾರು ತೋಳ್ಬಲವನ್ನು ಸೋಲಿಸಬಲ್ಲದೆಂದು**" ಸುಭಾಷಿತವೊಂದು ಹೇಳಿದೆ. ಅಂತೆಯೇ ಶಕ್ತಿಯಿಂದ ಸಾಧ್ಯವಾಗದದ್ದನ್ನು ಯುಕ್ತಿಯಿಂದ ಸಾಧಿಸುವ ನಿಟ್ಟಿನಲ್ಲಿ "**ಶಕ್ತಿಗಿಂತ ಯುಕ್ತಿ ಮೇಲು**" ಎಂಬ ಗಾದೆ ಸೃಷ್ಟಗೊಂಡಿದೆ.

ಶಕ್ತಿಯಿಂದ ಸಾಧಿಸಲಾಗದ ಕೆಲಸವನ್ನು ಯುಕ್ತಿಯಿಂದ ಸಾಧಿಸಬೇಕು. ಯುಕ್ತಿಗೆ ಎಲ್ಲಾ ಕಡೆಯೂ ಗೆಲುವಿರುತ್ತದೆ. ಸಂಧರ್ಭೋಚಿತ ಉಪಾಯದಿಂದ ಎಂತಹ ಶತ್ರುವನ್ನಾದರೂ ಸೋಲಿಸಬಹುದು. ಉದಾ: ಧೀರ್ಘಕರ್ಣನೆಂಬ ಮೊಲ ಶಕ್ತಿಯಿಂದ ಸಾಧಿಸಲಾಗದ ಕೆಲಸವನ್ನು ಯುಕ್ತಿಯಿಂದ ಸಿಂಹವು ಬಾಯಿಗೆ ಬೀಳುವಂತೆ ಮಾಡಿ ತನ್ನ ಮಿತ್ರರನ್ನೆಲ್ಲರನ್ನು ರಕ್ಷಿಸಿತು. ಬೀರಬಲ್ಲನು ಅಕ್ಬರನಿಗೆ, ತೆನಾಲಿ ರಾಮಕೃಷ್ಣನು ಕೃಷ್ಣದೇವರಾಯನಿಗೆ ಪ್ರಿಯವಾದದ್ದು ಅವರ ಯುಕ್ತಿಯಿಂದ ಎಂದು ಹೇಳಬಹುದು. ಆದ್ದರಿಂದ ಶಕ್ತಿಗಿಂತ ಯುಕ್ತಿಯೇ ಮೇಲು ಎಂದು ಹೇಳಬಹುದು.

**ಅಥವಾ**

**ಗಿಡವಾಗಿ ಬಗ್ಗದ್ದು ಮರವಾಗಿ ಬಗ್ಗಿತೆ**

ಗಾದೆ ವೇದಗಳಿಗೆ ಸಮಾನ , ಗಾದೆ ಹಿರಿಯರು ಮತ್ತು ಜನಪದರ ಜೀವನದ ಅನುಭವದ ನುಡಿಮುತ್ತುಗಳು. ಗಾದೆಗಳು ಆಕಾರದಲ್ಲಿ ವಾಮನನಾದರೂ ಅರ್ಥದಲ್ಲಿ ತ್ರಿವಿಕ್ರಮನಂತೆ. ಗಾದೆಗಳು ಜೀವನದನುಭವಕ್ಕೆ ಹಿಡಿದ ಕನ್ನಡಿಯಾಗಿವೆ. ಆದುದರಿಂದ ಗಾದೆಗಳು ಸತ್ಯಕ್ಕೆ ಬಹಳ ಹತ್ತಿರವಾಗಿವೆ. **ಗಿಡವಾಗಿ ಬಗ್ಗದು ಮರವಾಗಿ ಬಗ್ಗೀತೆ** ಎಂಬ ಈ ಮೇಲಿನ ಗಾದೆಯು ಪ್ರಸಿದ್ಧವಾಗಿದೆ.

ಯಾವುದೇ ಗಿಡಗಳನ್ನು ಚಿಕ್ಕದಿದ್ದಾಗಲೆ ಬೇಕಾದ ರೀತಿಯಲ್ಲಿ ಬಗ್ಗಿಸಿಕೊಳ್ಳಬಹುದು. ಆದರೆ ಮರವಾಗಿ ಬೆಳೆದು ನಿಂತಾಗ ಬಗ್ಗಿಸಲು ಸಾಧ್ಯವಾಗುವುದಿಲ್ಲ. ಚಿಕ್ಕವರಿದ್ದಾಲೆ ಮಕ್ಕಳಿಗೆ ಒಳ್ಳೆಯ ಬುದ್ಧಿ ಸಂಸ್ಕಾರವನ್ನು ಕೊಟ್ಟಾಗ ಅದು ಕಲಿತು ಮುಂದೆ ಉಳಿಸಿಕೊಂಡು ಹೋಗುತ್ತದೆ. ದೊಡ್ಡವನಾಗಿ ಬೆಳೆದಾಗ ಅವರು ಕಲಿಯದೇ ಹೋಗಬಹುದು. ಬೆಳೆಯುವ ಸಿರಿ ಮೊಳಕೆಯಲ್ಲಿ ಎಂಬ ಇನ್ನೊಂದು ಗಾದೆಯು ಇದೆ ಅರ್ಥವನ್ನು ಹೋಲುತ್ತದೆ. ಬಾಲ್ಯದಲ್ಲಿ ಕಲಿಯಲು ಆಸಕ್ತಿ ತೋರಿದಷ್ಟು ಯೌವನಾವಸ್ಥೆಗೆ ಬಂದಾಗ ಕಲಿಸಲು ಕಷ್ಟಪಡಬೇಕಾಗುತ್ತದೆ. ಆದ್ದರಿಂದ ಬಾಲ್ಯದಲ್ಲಿದ್ದಾಗಲೆ ಮಕ್ಕಳಿಗೆ ಸರಿಯಾದ ತರಬೇತಿಯನ್ನು ನೀಡಬೇಕು. ಕಾದಾಗಲೆ ಕಬ್ಬಿಣವನ್ನು ಬೇಕಾದ ರೀತಿಯಲ್ಲಿ ಬಗ್ಗಿಸಿಕೊಳ್ಳಬಹುದು. ಅದೆ ರೀತಿ ಯಾವುದೇ ಸಮಸ್ಯೆಗಳು, ನೋವುಗಳು ಇತ್ಯಾದಿಗಳನ್ನು ಸಣ್ಣವಾಗಿದ್ದಾಗಲೆ ಬಗೆಹರಿಸಿಕೊಂಡರೆ ಒಳಿತಾಗುತ್ತದೆ ಎಂದು ಹೇಳಬಹುದು.

**IX. ಈ ಕೆಳಗಿನ ವಾಕ್ಯ ಅಥವಾ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ : 6 x 3 = 18**

33. **" ಕಣ್ಣ ನೀರಿದೇಕೆ ತಾಯೆ, ತುಸವೂಣೆಯವಿಲ್ಲ"**

**ಆಯ್ಕೆ:-** ಈ ವಾಕ್ಯವನ್ನು ' **ಪು. ತಿ. ನರಸಿಂಹಾಚಾರ್** ' ಅವರು ರಚಿಸಿರುವ '**ಶಬರಿ**' ಗೀತನಾಟಕದಿಂದ ಆಯ್ದ '**ಶಬರಿ**' ಎಂಬ ಪಾಠದಿಂದ ಆರಿಸಲಾಗಿದೆ.

**ಸಂದರ್ಭ :** ಇದು ರಾಮ ಶಬರಿಗೆ ಹೇಳುವ ಮಾತಾಗಿದೆ. ಶಬರಿ ರಾಮಲಕ್ಷ್ಮಣರಿಗೆ ಆತಿಥ್ಯ ಮಾಡಿದ ನಂತರ ರಾಮ ನನಗೆ ಬಹಳ ಸಂತೋಷವಾಯಿತು. ಕೊನೆಗೂ ನನ್ನಾಸೆಯ ದಾರಿ ಹಿಡಿದು ಬಂದಿರಲ್ಲವೇ, ದಣಿದು ಬಂದ ನಿಮಗೆ ಈಗ ಸಮಾಧಾನವಾಯಿತಾ? ಹಸಿವು – ಬಾಯಾರಿಕೆ ನೀಗಿತಾ? ಅಯ್ಯೋ ಇವಳು ಬಡವಳು ಒಬ್ಬಳೇ ಏನು ಮಾಡುತ್ತಾಳೆ ಎಂದು ನನ್ನ ಮೇಲೆ ದಯೆ ತೋರಿದಿರಾ? ಎಂದು ಕಣ್ಣಲ್ಲಿ ನೀರು ತುಂಬಿಕೊಂಡಾಗ ರಾಮ ಇದೇಕೆ ತಾಯಿ ಕಣ್ಣಲ್ಲಿ ನೀರು ನಿಮ್ಮ ಆತಿಥ್ಯದಲ್ಲಿ ಸ್ವಲ್ಪವೂ ಕೊರೆತ ಕಾಣಲಿಲ್ಲ. ನಮ್ಮ ಅಯೋಧ್ಯೆಯ ಅರಮನೆಯಲ್ಲೂ ಕೂಡ ಇದಕ್ಕಿಂತ ಹಿತವಾದದ್ದು ಇಲ್ಲ ಎಂದು ರಾಮ ಶಬರಿಗೆ ಹೇಳಿದ ಸಂದರ್ಭವಾಗಿದೆ.

**ಸ್ವಾರಸ್ಯ :** ಶಬರಿಯ ಆನಂದಕ್ಕೆ ಪಾರವೇ ಇಲ್ಲದಾಗಿ ಆನಂದಬಾಷ್ಪ ಸುರಿಸುವುದನ್ನು ಕಂಡ ರಾಮ ತಾಯಿ ನಿಮ್ಮ ಆತಿಥ್ಯದಲ್ಲಿ ಕೊರತೆಯಿಲ್ಲ ಎಂದು ಧನ್ಯತಾಭಾವವನ್ನು ತೋರಿಸುವುದು ಸ್ವಾರಸ್ಯಪೂರ್ಣವಾಗಿ ಮೂಡಿಬಂದಿದೆ.

34. **“ಯಾವ ಜೀವಿಯೂ ತನ್ನಷ್ಟಕ್ಕೆ ತಾನಿಲ್ಲ”**

**ಆಯ್ಕೆ:–** ಈ ವಾಕ್ಯವನ್ನು **ದೇವನೂರ ಮಹಾದೇವ** ಅವರು ಬರೆದ **‘ಎದೆಗೆ ಬಿದ್ದ ಅಕ್ಷರ’** ಎಂಬ ಕೃತಿಯಿಂದ ಆಯ್ದ **‘ಎದೆಗೆ ಬಿದ್ದ ಅಕ್ಷರ** ’ಎಂಬ ಪಾಠದಿಂದ ಆರಿಸಿಕೊಳ್ಳಲಾಗಿದೆ.

**ಸಂದರ್ಭ:–** ಲೇಖಕರು ಬುದ್ಧನ ಕಾರುಣ್ಯ ತಮ್ಮ ಮನದಲ್ಲಿ ಕೂತ ಬಗೆಯನ್ನು ಅಶೋಕ ಪೈರವರು ಹೇಳಿದ ಸಂಶೋಧನಾ ಸತ್ಯದ ಉದಾಹರಣೆ ನೀಡಿ ಅರ್ಥೈಸುವ ಸಂದರ್ಭದಲ್ಲಿ ಈ ಮಾತು ಬಂದಿದೆ. ಟಿ.ವಿ ನೋಡುವವರ ಭಾವನೆಗಳು ಪಕ್ಕದ ಕೊಠಡಿಯಲ್ಲಿದ್ದವರ ಮೇಲೆ ಹೇಗೆ ಪರಿಣಾಮ ಬೀರಿತೋ, ಹಾಗೆಯೇ ಯಾವ ಜೀವಿಯೂ ತನ್ನಷ್ಟಕ್ಕೆ ತಾನಿಲ್ಲ. ಒಂದು ಜೀವಿಗೆ ಆಗುವ ದುಃಖ ದುಮ್ಮಾನ ಪರಿಸರದಲ್ಲಿ ಉಸಿರಾಡುತ್ತ ಇರುವ ಎಲ್ಲಾ ಜೀವಿಗಳಲ್ಲೂ ಕಂಪನ ಉಂಟು ಮಾಡುತ್ತದೆ. ಈ ಅನುಕಂಪನ ಇಡೀ ಜೀವಸಂಕುಲವೆಲ್ಲ ಒಂದೇ ಎಂದು ಅರ್ಥೈಸಿದ ಸಂದರ್ಭವಾಗಿದೆ.

**ಸ್ವಾರಸ್ಯ:** ಯಾವ ಜೀವಿಯು ಸ್ವತಂತ್ರವಾಗಿ ಬದುಕಲು ಸಾಧ್ಯವಿಲ್ಲ, ಜೀವಿಗಳು ಪರಸ್ಪರಾವಲಂಬಿಗಳು, ಇಡೀ ಜೀವಸಂಕುಲವೆಲ್ಲ ಒಂದೇ ಎಲ್ಲರೂ ಸಮಾನರು ಎಂದು ಹೇಳಿರುವುದು ಸ್ವಾರಸ್ಯಪೂರ್ಣವಾಗಿ ಬಂದಿದೆ.

35. **“ತಸ್ಕರಸ್ಯಾನೃತಂ ಬಲಂ”**

**ಆಯ್ಕೆ:** ಈ ವಾಕ್ಯವನ್ನು **‘ದುರ್ಗಸಿಂಹ ಕವಿ’** ವಿರಚಿತ **‘ಪಂಚತಂತ್ರ’** ಎಂಬ ಕೃತಿಯಿಂದ ಆಯ್ದ **‘ವೃಕ್ಷಸಾಕ್ಷಿ’** ಎಂಬ ಪಾಠದಿಂದ ಆರಿಸಲಾಗಿದೆ.

**ಸಂದರ್ಭ:** ದುಷ್ಟಬುದ್ಧಿಯು ಧರ್ಮಬುದ್ಧಿಯ ಮೇಲೆ ಹೊನ್ನು ಕದ್ದ ಆರೋಪವನ್ನು ಹೊರಿಸಿ, ಅತಿ ಮೋಸದ ಮನಸ್ಸಿನಿಂದ, ಹಣದ ದುರಾಸೆಯಿಂದ ಬುದ್ಧಿಕೆಡಿಸಿಕೊಂಡು **‘ಕಳ್ಳನಾದವನಿಗೆ ಸುಳ್ಳೇ ಬಲ’** ಎನ್ನುವ ಮಾತನ್ನು ನೆನೆಯುತ್ತ ಸುಳ್ಳನ್ನು ಹೇಳಿದ ಸಂದರ್ಭವಾಗಿದೆ.

**ಸ್ವಾರಸ್ಯ :** ಕಳ್ಳರಾದವರಿಗೆ ಸುಳ್ಳೇ ಬಲವಾದ ಸಾಕ್ಷಿ ಎಂದು ಕವಿಯು ವಾಕ್ಯುಕ್ತಿಯನ್ನು ಬಳಸಿರುವುದು ಸ್ವಾರಸ್ಯಪೂರ್ಣವಾಗಿ ಸಂದರ್ಭಕ್ಕನುಗುಣವಾಗಿ ಮೂಡಿಬಂದಿದೆ.

**36. “ ಚಟಿಕಾರರು ಚೌಕಿ ಮಾಡುತ, ನಡಿದರೂ ಹೇಳದೆ ಗುಡದಾಗ ”**

**ಆಯ್ಕೆ :–**ಈ ವಾಕ್ಯವನ್ನು **ಡಾ. ಬಿ. ಎಸ್. ಗದ್ದಗಿಮಠ** ಅವರು ಸಂಪಾದಿಸಿರುವ **‘ಕನ್ನಡ ಜನಪದ ಗೀತೆಗಳು’** ಕೃತಿಯಿಂದ ಆಯ್ದು ನೀಡಿರುವ **‘ಹಲಗಲಿ ಬೇಡರು’** ಎಂಬ ಪದ್ಯದಿಂದ ಆರಿಸಲಾಗಿದೆ.

**ಸಂದರ್ಭ:** ಹಲಗಲಿಗೆ ಬಂದ ಬ್ರಿಟೀಷರ ದಂಡು ಬೇಡರನ್ನು ಹಿಂದೆ ಹಿಂದೆ ಹೋಗಿ ತಿರುತಿರುವಿ ಹಾಕಿ ಏನು ಉಳಿಯದ ಹಾಗೆ ಕಡಿದು ಹಾಕಿದರು. ಬೇಡರನ್ನು ಮಧ್ಯಕ್ಕೆ ಹಾಕಿಕೊಂಡು ಕರುಣೆ ಇಲ್ಲದ ಹಾಗೆ ಗುಂಡನ್ನು ಹೊಡೆದರು. ಆಗ ಚಟಿಕಾರರು (ಆಂಗ್ಲೋಇಂಡಿಯನ್ಸ್) ಬೇಡರನ್ನು ಕಾವಲು ಕಾಯುತ್ತ ಇರುವಾಗ ಬೇಡರು ಗುಡ್ಡದ ಕಡೆ ಹೋದರು ಎಂದು ಲಾವಣಿಕಾರ ಹೇಳಿದ ಸಂದರ್ಭವಾಗಿದೆ.

**ಸ್ವಾರಸ್ಯ:** ಬೀಸೊ ದೊಣ್ಣೆಯಿಂದ ತಪ್ಪಿಸಿಕೊಂಡರೆ ಸಾವಿರ ವರ್ಷ ಆಯುಷ್ಯ ಎನ್ನವ ಹಾಗೆ ಬೇಡರು ಬ್ರಿಟೀಷರಿಂದ ತಪ್ಪಿಸಿಕೊಳ್ಳಲು ಗುಡ್ಡದ ಕಡೆ ಹೋದರು ಎಂದು ಹೇಳಿರುವುದು ಸ್ವಾರಸ್ಯಪೂರ್ಣವಾಗಿ ಮೂಡಿಬಂದಿದೆ.

**37. “ ಹೊಸಗಾಲದ ಹಸುಮಕ್ಕಳ ಹರಸಿ”**

**ಆಯ್ಕೆ:–** ಈ ವಾಕ್ಯವನ್ನು **ದ.ರಾ.ಬೇಂದ್ರೆ** ವಿರಚಿತ **‘ಗರಿ’** ಕವನ ಸಂಕಲನದಿಂದ ಆಯ್ದ **‘ಹಕ್ಕಿ ಹಾರುತಿದೆ ನೋಡಿದಿರಾ’** ಎಂಬ ಪದ್ಯದಿಂದ ಆರಿಸಲಾಗಿದೆ.

**ಸಂದರ್ಭ:–** ಬೇಂದ್ರೆಯವರು ಯುವ ಜನಾಂಗದ ಉತ್ತಮ ಭವಿಷ್ಯಕ್ಕಾಗಿ ಕಾಲದ ಶುಭ ಹಾರೈಕೆಯನ್ನು ಕುರಿತು ಹೇಳುವ ಸಂದರ್ಭದಲ್ಲಿ ಈ ವಾಕ್ಯವನ್ನು ಹೇಳುತ್ತಾರೆ. ಕಾಲವು ಯುಗಯುಗಗಳ ಹಣೆಬರೆಹವನ್ನು, ಅಳಿಸಿ ಹಾಕಿ ಹೊಸತನದ ಭಾಗ್ಯವನ್ನು ತೆರೆದು ಕೊಟ್ಟಿದೆ. ಹಾಗೆಯೇ ರೆಕ್ಕೆಯ ಬಿಚ್ಚಿ ಮೇಲೇರುತ್ತಾ **ಹೊಸಗಾಲದ ಹಸು ಮಕ್ಕಳಿಗೆ**

**ಹೊಸ ಚೇತನವನ್ನು ನೀಡುತ್ತ, ಉತ್ತಮ ಭವಿಷ್ಯಕ್ಕಾಗಿ ಶುಭ ಹರಸಿದೆ** ಎಂದು ಹೇಳುವ ಸಂದರ್ಭದಲ್ಲಿ ಈ ವಾಕ್ಯ ಬಂದಿದೆ.

**ಸ್ವಾರಸ್ಯ:–** ಯುವ ಜನಾಂಗದ ಭವಿಷ್ಯಕ್ಕೆ ಶುಭವಾಗಲಿ ಎಂದು ಹರಸುವ ಕಾಲಪಕ್ಷಿಯ ಗುಣ ಸ್ವಾರಸ್ಯ ಪೂರ್ಣವಾಗಿ ಮೂಡಿಬಂದಿದೆ.

38. **" ನೊಳವಿಂಗೆ ಕುಪ್ಪೆ ವರಂ "**

**ಆಯ್ಕೆ:** ಈ ವಾಕ್ಯವನ್ನು **'ಮಹಾಕವಿ ಪಂಪ'** ಬರೆದ **'ವಿಕ್ರಮಾರ್ಜುನ ವಿಜಯ'** ಕೃತಿಯಿಂದ ಆಯ್ದ **'ಕೆಮ್ಮನೆ ಮೀಸೆವೊತ್ತೆನೇ'** ಎಂಬ ಪದ್ಯದಿಂದ ಆರಿಸಿಕೊಳ್ಳಲಾಗಿದೆ.

**ಸಂದರ್ಭ :** ದ್ರುಪದ'ನು ಹೀಯಾಳಿಸಿದಾಗ ಕೋಪಗೊಂಡ ದ್ರೋಣನು ದ್ರುಪದನನ್ನು ಕುರಿತು **"**ಎಲೈ ದುಷ್ಟನೇ, 'ನೊಣಕ್ಕೆ ಕಸದ ತಿಪ್ಪೆಯೇ ಶ್ರೇಷ್ಠವಾದುದು' ಎಂಬಂತೆ ನಿನ್ನ ಪರಾಕ್ರಮ ನನ್ನವರೆಗೂ ಉಂಟೇ? ನನ್ನನ್ನು ಹಿಯ್ಯಾಳಿಸಿದ ನಿನ್ನನ್ನು ಅನಾಯಾಸವಾಗಿ ನನ್ನ ಶಿಷ್ಯರಿಂದ ನೀನು ಗಾಬರಿಪಡುವಂತೆ ಕಟ್ಟಿಸದೆ ಬಿಟ್ಟರೆ ನಾನು ಸುಮ್ಮನೆ ಮೀಸೆ ಹೊತ್ತಿರುವೆನೆ (ಮೀಸೆ ಹೊತ್ತಿರುವುದು ವ್ಯರ್ಥವಲ್ಲವೇ?) "ಎಂದು ಪ್ರತಿಜ್ಞೆಯನ್ನು ಮಾಡಿದ ಸಂದರ್ಭವಾಗಿದೆ.

**ಸ್ವಾರಸ್ಯ :** 'ನೊಣಕ್ಕೆ ಕಸದ ತಿಪ್ಪೆಯೇ ಶ್ರೇಷ್ಠವಾದುದು' ಎಂಬ ಗಾದೆಯಂತೆ ವ್ಯಕ್ತಿಯ ಯೋಗ್ಯತೆಗೆ ತಕ್ಕಂತೆ ಗುಣ–ನಡತೆ ಅಭಿರುಚಿಗಳಿರುತ್ತವೆ. ಎಂಬುದು ಇಲ್ಲಿ ಸ್ವಾರಸ್ಯಪೂರ್ಣವಾಗಿದೆ

**X. ಈ ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿ ಬರೆಯಿರಿ :** 1 X 4 = 4

39. **ಮತಗಳೆಲ್ಲವೂ** ಪಥಗಳು ಎನ್ನುವ
ಹೊಸ ಎಚ್ಚರದೊಳು ಬದುಕೋಣ
ಭಯ ಸಂಶಯದೊಳು ಕಂದಿದ ಕಣ್ಣೊಳು
ನಾಳಿನ ಕನಸನು **ಬಿತ್ತೋಣ.**

**ಅಥವಾ**

**ಕಲುಷಿತವಾದೀ** ನದೀ ಜಲಗಳಿಗೆ
ಮುಂಗಾರಿನ ಮಳೆಯಾಗೋಣ
ಬರಡಾಗಿರವೀ ಕಾಡು ಮೇಡುಗಳ
ವಸಂತವಾಗುತ **ಮುಟ್ಟೋಣ**

**XI. ಈ ಕೆಳಗಿನ ಪದ್ಯಭಾಗವನ್ನು ಓದಿ ಅರ್ಥಮಾಡಿಕೊಂಡು, ಅಡಕವಾಗಿರುವ ಮೌಲವನಾದರಿಸಿ ಸಾರಾಂಶ ಬರೆಯಿರಿ :** 1 X 4 = 4

40. **ನೆಲಕಿಜಿವೆನೆಂದು ಬಗೆದಿರೆ।**
**ಚಲಕಿಜಿವೆಂ ಪಾಂಡುಸುತರೊಳೀನೆಲನಿದು ಪಾ॥**
**ಟಿಕ್ನೆಲನೆನಗೆ ದಿನಪಸುತನಂ।**
**ಕೊಲಿಸಿದ ನೆಲನೊಡನೆ ಮತ್ತೆ ಪುದುವಾಟ್ಟಿಪೆನೇ॥**

ಮಹಾಕವಿ **' ರನ್ನ '** ವಿರಚಿತ **" ಸಾಹಸ ಭೀಮ ವಿಜಯ "** ಎಂಬ ಕೃತಿಯಿಂದ ಆಯ್ದ **' ಛಲಮನೆ ಮೆಜಿಪೆಂ '** ಎಂಬ ಪದ್ಯದಿಂದ ಆರಿಸಿಕೊಳ್ಳಲಾಗಿದೆ.

ಮಹಾಭಾರತ ಯುದ್ಧದಲ್ಲಿ ದುರ್ಯೋಧನನು ತಂದೆ–ತಾಯಿಯರ ಅಪೇಕ್ಷೆಯಂತೆ ರಣರಂಗದಲ್ಲಿ ಶರಶಯ್ಯೆಯಲ್ಲಿ ಮಲಗಿದ್ದ ತಾತ ಭೀಷ್ಮರ ಸಲಹೆಯನ್ನು ಪಡೆಯಲು ಬರುತ್ತಾನೆ. ಭೀಷ್ಮರು ಯುದ್ಧವನ್ನು ಮಾಡದೆ ಪಾಂಡವರೊಂದಿಗೆ ಸಂಧಿಮಾಡಿಕೊಂಡು ಬದುಕಬೇಕೆಂಬ ಸಲಹೆಯನ್ನು ದುರ್ಯೋಧನನಿಗೆ ನೀಡುತ್ತಾರೆ. ಆದರೆ ಛಲದಂಕಮಲ್ಲನಾದ ದುರ್ಯೋಧನ ಅದಕ್ಕೊಪ್ಪದೆ, ತಾನು ಯುದ್ಧವನ್ನೇ ಮಾಡಿ ತನ್ನ ಛಲವನ್ನೆ ಸಾಧಿಸುವೆ ಎಂದು ಹೇಳುತ್ತಾನೆ. ಈ ಸಂದರ್ಭದಲ್ಲಿ ಪ್ರಕಟಗೊಳ್ಳುವ ದುರ್ಯೋಧನನ ಛಲದ ಗುಣ, ಅವನ ಸ್ವಭಾವಕ್ಕೆ ತಕ್ಕುದಾಗಿ ಇಲ್ಲಿ ನಿರೂಪಿತವಾಗಿದೆ.

"ಅಜ್ಜಾ ಈ ಭೂಮಿಗಾಗಿ(ರಾಜ್ಯಕ್ಕಾಗಿ) ಹೋರಾಡುವೆನೆಂದು ಭಾವಿಸಿದಿರಾ? ಇಲ್ಲ ಅಜ್ಜಾ ಇಲ್ಲ. ಛಲಕ್ಕಾಗಿಯೇ ಪಾಂಡುವಿನ ಮಕ್ಕಳಲ್ಲಿ ಹೋರಾಡುತ್ತೇನೆ. ಈ ನೆಲ(ಭೂಮಿ) ನನಗೆ ಹಾಳು ಬಿದ್ದಿರುವ ನೆಲ. ದಿನಪಸುತನಾದ ಆ ಕರ್ಣನನ್ನು ಕೊಲ್ಲಿಸಿದ ಈ ನೆಲದೊಡನೆ ಮತ್ತೆ ನಾನು ಕೂಡಿ ಬಾಳುವುದುಂಟೆ? ದುರ್ಯೋಧನನ ನೆಲದ ಮೇಲಿನ ವ್ಯಾಮೋಹಕ್ಕಿಂತ ಛಲದ ಗುಣ ಪ್ರತಿಪಾದಿತವಾಗಿರುವುದು ಮೌಲ್ಯಭರಿತವಾಗಿದೆ.

**XII. ಈ ಕೆಳಗಿನ ಪ್ರಶ್ನೆಗಳಿಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ :** 2 X 4 = 8

41. **'ಮಾದರಿ ಮೈಸೂರು ರಾಜ್ಯ ನಿರ್ಮಾಣ ಮಾಡುವಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರ ಕೊಡುಗೆಗಳನ್ನು ವಿವರಿಸಿ.**

**ಉತ್ತರ:** ನಾಲ್ವಡಿ ಕೃಷ್ಣರಾಜ ಒಡೆಯರು 1902 ರಲ್ಲಿ ಮೈಸೂರು ರಾಜ್ಯದ ನೇರ ಉಸ್ತುವಾರಿ ವಹಿಸಿಕೊಂಡರು. ಆಗ ದಿವಾನರಾಗಿದ್ದ ಸರ್. ಕೆ. ಶೇಷಾದ್ರಿ ಅಯ್ಯರ್‌ರವರ ಸಹಕಾರದೊಡನೆ ಮೈಸೂರು ರಾಜ್ಯದ ಸರ್ವೋತೋಮುಖ ಅಭಿವೃದ್ಧಿಗೆ ಕಂಕಣಬದ್ಧರಾದರು. 1923ರಲ್ಲಿ ಹೊಸ ಕಾನೂನೊಂದನ್ನು ಜಾರಿಗೆ ತಂದು ಪ್ರಜಾಪ್ರತಿನಿಧಿ ಸಭೆಯನ್ನು ಶಾಸನಬದ್ಧ ಸಂಸ್ಥೆಯನ್ನಾಗಿ ಮಾರ್ಪಡಿಸಿದರು.

1907 ರಲ್ಲಿ ನ್ಯಾಯ ವಿಧಾಯಕ ಸಭೆಯನ್ನೂ ಸಹ ಸ್ಥಾಪಿಸಿದರು. ಪ್ರಜಾಪ್ರತಿನಿಧಿ ಸಭೆಯಲ್ಲಿ ಮಂಡಿಸಿದ ಎಲ್ಲ ವಿಷಯಗಳನ್ನೂ ಸಹ ವಿರ್ಮಶಿಸುವ ಅಧಿಕಾರ ಆ ಸಭೆಗೆ ಇದ್ದಿತು. 1. ಗ್ರಾಮ ನಿರ್ಮಲೀಕರಣ 2. ವೈದ್ಯ ಸಹಾಯ 3. ವಿದ್ಯಾ ಪ್ರಚಾರ 4. ನೀರಿನ ಸೌಕರ್ಯ 5. ಪ್ರಯಾಣ ಸೌಲಭ್ಯ ಮುಂತಾದ ಕ್ಷೇತ್ರಗಳು ಸ್ವಯಂ ಆಡಳಿತ ಕ್ಷೇತ್ರಗಳಾದವು. ಸಾಹಿತ್ಯ, ಸಂಗೀತ, ವಾಸ್ತುಶಿಲ್ಪಗಳ ಅಭಿವೃದ್ಧಿಗೆ ಒತ್ತು ನೀಡಿದರು. ನಾಡಿನಲ್ಲೇ ಮೊಟ್ಟಮೊದಲ ವಿಶ್ವವಿದ್ಯಾನಿಲಯವಾದ ಮೈಸೂರು ವಿಶ್ವವಿದ್ಯಾನಿಲಯವನ್ನು ಸ್ಥಾಪಿಸಿದರು. ಬೆಂಗಳೂರಿನಲ್ಲಿ ಕನ್ನಡ ಸಾಹಿತ್ಯ ಪರಿಷತ್, ಮೈಸೂರು ಬ್ಯಾಂಕಿನ ಸ್ಥಾಪನೆ ಮಾಡಲಾಯಿತು. ಉಚಿತ ಆಸ್ಪತ್ರೆಗಳು ಕಾರ್ಯಾರಂಭ ಮಾಡಿದವು. 1906ರಲ್ಲಿ ಸಹಕಾರ ಸಂಘಗಳನ್ನು ಸ್ಥಾಪಿಸಲಾಯಿತು. ರೈಲು ಯೋಜನೆಗಳನ್ನು ಜಾರಿಗೆ ತಂದರು. ಅಲ್ಲದೆ ಒಡೆಯರ ಕಾಲದಲ್ಲಿ ಶಿವನಸಮುದ್ರ ಜಲವಿದ್ಯುತ್ ಯೋಜನೆ, ವಾಣಿ ವಿಲಾಸ ಸಾಗರ ಆಣೆಕಟ್ಟು ಮತ್ತು ಕನ್ನಾಂಬಾಡಿಯಲ್ಲಿ ಕೃಷ್ಣರಾಜ ಸಾಗರ ಆಣೆಕಟ್ಟು ನಿರ್ಮಾಣ ಮಾಡಿದ್ದರಿಂದ ವಿದ್ಯುತ್ ಮತ್ತು ನೀರಾವರಿ ಯೋಜನೆಗಳು ಕಾರ್ಯರೂಪಕ್ಕೆ ಬಂದವು. ಪ್ರಾಥಮಿಕ ಮತ್ತು ಮಾಧ್ಯಮಿಕ ವಿದ್ಯಾಭ್ಯಾಸವನ್ನು ಉಚಿತ ಮತ್ತು ಕಡ್ಡಾಯವಾಗಿ ಪ್ರಾರಂಭಿಸಲಾಯಿತು. ಮೈಸೂರು ಸಂಸ್ಥಾನವನ್ನು ಮಾದರಿ ಸಂಸ್ಥಾನವನ್ನಾಗಿ ರೂಪಿಸಿದರು. ಇವರ ಕಾಲದಲ್ಲಿ ಇಡೀ ಭರತ ಖಂಡದಲ್ಲಿ ಯಾವ ಸಂಸ್ಥಾನವೂ ಕಾಣದ ಅಭಿವೃದ್ಧಿಯನ್ನು ಮೈಸೂರು ರಾಜ್ಯವು ಕಂಡುದರಿಂದ, ಮೈಸೂರು ಸಂಸ್ಥಾನವು 'ಮಾದರಿ ಮೈಸೂರು ರಾಜ್ಯ' ಎಂಬ ಕೀರ್ತಿಗೆ ಪ್ರಾಪ್ತವಾಗುವಂತೆ ಮಾಡಿದ್ದು ಅವರ ಕೊಡುಗೆಯಾಗಿದೆ.

**ಅಥವಾ**

**ವಿಶ್ವೇಶ್ವರಯ್ಯನವರು ಮೈಸೂರು ದಿವಾನರಾಗಿ ಶಿಕ್ಷಣ ಮತ್ತು ಕೈಗಾರಿಕಾ ಕ್ಷೇತ್ರಗಳಿಗೆ ಸಲ್ಲಿಸಿದ ಸೇವೆಯನ್ನು ಕುರಿತು ಬರೆಯಿರಿ.**

**ಉತ್ತರ:** ವಿಶ್ವೇಶ್ವರಯ್ಯನವರು ಆಧುನಿಕ ಶಿಕ್ಷಣವೇ ಎಲ್ಲ ಸಮಸ್ಯೆಗಳಿಗೂ ಪರಮೋಚ್ಚ ಪರಿಹಾರ, ಶಿಕ್ಷಣವು ಸಂಜೀವಿನಿ ಎಂಬುದನ್ನು ಅರಿತು "ಶಿಕ್ಷಣಕ್ಕಾಗಿ ಶಿಕ್ಷಣವಿರಬೇಕು. ಅದು ಕೆಲವೇ ಜನರ ಸೊತ್ತಾಗದೆ ಪ್ರಗತಿಪರ ರಾಜ್ಯದಲ್ಲಿ ಎಲ್ಲರ ಆಜನ್ಮಸಿದ್ಧ ಹಕ್ಕಾಗಬೇಕು" ಎಂದು ಹೇಳಿದ್ದಾರೆ. ಅದಕ್ಕಾಗಿ ಅವರು ಶಿಕ್ಷಣದ ವಿವಿಧ ಯೋಜನೆಗಳನ್ನು ರೂಪಿಸಿದರು. 1913 ರಲ್ಲಿ ಪ್ರಾಥಮಿಕ ಶಿಕ್ಷಣ ನಿಬಂಧನೆಯನ್ನು ಜಾರಿಗೆ ತಂದರು. ಪ್ರೌಢಶಿಕ್ಷಣ ಶಾಲೆಗಳು ಮದ್ರಾಸ್ ವಿಶ್ವವಿದ್ಯಾನಿಲಯದ ನಿಯಂತ್ರಣಕ್ಕೆ ಒಳಪಟ್ಟಿದ್ದವು. ಇದನ್ನು ಬದಲಿಸಿ ಮೈಸೂರು ಸಂಸ್ಥಾನವೇ ಪ್ರತ್ಯೇಕವಾದ ಪ್ರೌಢಶಿಕ್ಷಣದ ಅಂತಿಮ ಪರೀಕ್ಷೆ ನಡೆಸುವ ಯೋಜನೆಯನ್ನು ಆರ್ಥಿಕ ಪರಿಷತ್ತಿನ ಮೂಲಕ ರೂಪುಗೊಳಿಸಿದರು. ಮೈಸೂರು ವಿಶ್ವವಿದ್ಯಾನಿಲಯದ ಸ್ಥಾಪನೆ ಇವರ ಕಾಲದಲ್ಲಾಯಿತು. ತಾಂತ್ರಿಕ ಮತ್ತು ವೃತ್ತಿಪರ ಶಿಕ್ಷಣಕ್ಕೆ ಹೆಚ್ಚಿನ ಆದ್ಯತೆ ನೀಡಿದರು. ಇದಕ್ಕಾಗಿಯೇ ಬೆಂಗಳೂರಿನಲ್ಲಿ ಮೆಕಾನಿಕಲ್ ಎಂಜಿನಿಯರಿಂಗ್ ಶಾಲೆ, ಮೈಸೂರಿನಲ್ಲಿ ಚಾಮರಾಜೇಂದ್ರ ತಾಂತ್ರಿಕ ಸಂಸ್ಥೆಗಳನ್ನು ಪ್ರಾರಂಭಿಸಿದರು. ಕನ್ನಡ ಭಾಷೆ ಮತ್ತು ಸಾಹಿತ್ಯಗಳ ಬಗ್ಗೆ ಸಾರ್ವಜನಿಕರಲ್ಲಿ ಉಂಟಾಗಿದ್ದ ಆಸಕ್ತಿಯನ್ನು ಮನಗಂಡು 'ಕನ್ನಡ ಸಾಹಿತ್ಯ ಪರಿಷತ್ತನ್ನು' ಸ್ಥಾಪಿಸಿದ್ದು ಇವರ ಕಾಲದ ಮತ್ತೊಂದು ಮಹತ್ವದ ಸಾಧನೆಯಾಗಿದೆ.

ವಿಶ್ವೇಶ್ವರಯ್ಯ ಅವರು ಕೈಗಾರಿಕೆಗೆ ಅಗ್ರ ಪ್ರಾಶಸ್ತ್ಯ ನೀಡಿದ್ದರು. "ಕೈಗಾರಿಕೀಕರಣ ಇಲ್ಲವೆ ಅವನತಿ" ಎಂಬ ಘೋಷಣೆ ಮಾಡಿದರು. ಇವರ ಕಾಲದಲ್ಲಿ ಭದ್ರಾವತಿಯ ಕಬ್ಬಿಣ ಮತ್ತು ಉಕ್ಕು ಕಾರ್ಖಾನೆಯನ್ನು ಸ್ಥಾಪಿತವಾಯಿತು. ಇದಲ್ಲದೆ ಹೆಂಚಿನ ಕಾರ್ಖಾನೆ, ಮೊಳೆ ಮತ್ತು ಗೊಬ್ಬರ ತಯಾರಿಕಾ ಸ್ಥಾವರ, ಸಕ್ಕರೆ ಕಾರ್ಖಾನೆ, ಔಷಧ ತಯಾರಿಕಾ ಘಟಕ, ಗಂಧದ ಎಣ್ಣೆ, ಬೆಂಕಿಕಡ್ಡಿ ಹಾಗೂ ಕಾಗದದ ಕಾರ್ಖಾನೆಗಳು ಸ್ಥಾಪಿತವಾದವು. ಸೋಪು ಹಾಗೂ ಲೋಹ ತಯಾರಿಕೆ, ಕಲೆ ಮತ್ತು ಕರಕುಶಲ ಡಿಪೋ, ಕೃಷ್ಣರಾಜೇಂದ್ರ ಬಟ್ಟೆ ಗಿರಣಿ, ಕಾಗದದ ತಿರುಳು, ರಟ್ಟು, ಪೆನ್ಸಿಲ್,

ಬೆಂಕಿಕಡ್ಡಿ ಮತ್ತು ಪೀಠೋಪಕರಣಗಳ ತಯಾರಿಕಾ ಘಟಕಗಳು – ಹೀಗೆ ನೂರಾರು ಕೈಗಾರಿಕೆಗಳು ಪ್ರಾರಂಭಗೊಂಡವು. ಹೀಗೆ ವಿಶ್ವೇಶ್ವರಯ್ಯನವರು ಮೈಸೂರು ದಿವಾನರಾಗಿ ಶಿಕ್ಷಣ ಮತ್ತು ಕೈಗಾರಿಕಾ ಕ್ಷೇತ್ರಗಳಿಗೆ ಸೇವೆಯನ್ನು ಸಲ್ಲಿಸಿದಾರೆ.

**42. ಕವಿ ಕುವೆಂಪುರವರ ಪ್ರಕೃತಿಯೊಂದಿಗಿನ ಅದ್ವೈತಭಾವವು ಹಸುರು ಪದ್ಯದಲ್ಲಿ ಹೇಗೆ ಮೂಡಿಬಂದಿದೆ. ಎಂದು ವಿವರಿಸಿ.**

**ಉತ್ತರ:** ಕುವೆಂಪುರವರಿಗೆ ಪ್ರಕೃತಿಯೆಂದರೆ ಸಾಕ್ಷಾತ್ ದೇವರು. ಸದಾ ಒಂದಿಲ್ಲೊಂದು ಕವನಗಳಲ್ಲಿ ಪ್ರಕೃತಿಯ ರಮ್ಯತೆಯನ್ನು ಹೊಗಳಿದ್ದಾರೆ. ಅಂತಹ ಕವನಗಳಲ್ಲೊಂದಾದ 'ಹಸುರು' ಕವನವು ಆಶ್ವಯುಜ ಮಾಸದ ನವರಾತ್ರಿಯಲ್ಲಿ ಪ್ರಕೃತಿಯಲ್ಲಿ ಹೆಪ್ಪುಗಟ್ಟಿದ ಹಚ್ಚ ಹಸುರನ್ನು ಕಂಡು ಪ್ರೇರಿತವಾದ ಕವನವಾಗಿದೆ. ಈ ಕವಿತೆಯು ಕುವೆಂಪು ಅವರ 'ಕವಿ ಮತ್ತು ಪ್ರಕೃತಿ ಒಂದಾಗುವ ಅವರ ಕಾವ್ಯದ ಅದ್ವೈತ ಸ್ಥಿತಿಗೂ' ಸಮರ್ಥ ನಿದರ್ಶನವಾಗಿದೆ.

ನೀಲವರ್ಣದ ಸಮುದ್ರದಂತಿರುವ ವನವೆಲ್ಲವೂ ಹಸುರಾಗಿದೆ. ಕವಿಯ ಆತ್ಮಕ್ಕೂ ಕೂಡ ಹಸುರು ಆವರಿಸಿದೆ. ನವರಾತ್ರಿಯಲ್ಲಿ ಹಸುರಾದ ಕವಿಯ ಹೃದಯಕ್ಕೆ ಆಗಸವು ಹಸುರಾಗಿ ಕಾಣುತ್ತದೆ. ಆಗಸದಲ್ಲಿರುವ ಮುಗಿಲು ಹಸುರಾಗಿ ಕಾಣುತ್ತಿದೆ. ಗದ್ದೆಯ ಬಯಲೆಲ್ಲ ಹಸುರಾಗಿ ಗೋಚರಿಸಿದೆ. ಮಲೆ(ಬೆಟ್ಟ), ಕಣಿವೆಗಳೆಲ್ಲವು ಹಸುರಾಗಿವೆ. ಸಂಜೆಯ ಬಿಸಿಲು ಕೂಡ ಕವಿಗೆ ಹಸುರು ಕಾಣುತ್ತಿದೆ. ಹೊಸ ಹೂವಿನ ಕಂಪಿಗೂ ಹಸುರಿನ ಆವರಿಸಿದೆ. ಬೀಸುವ ತಂಪಾದ ಗಾಳಿಗೂ ಹಸುರು ವ್ಯಾಪಿಸಿದೆ. ಹಕ್ಕಿಯ ಕೊರಳಿಂದ ಬರುವ ಇಂಪಾದ ಧ್ವನಿ ಹಸುರಾಗಿದೆ. ಇಳೆಯ ಉಸಿರು (ಗಾಳಿ) ಕವಿಯ ದೇಹದಲ್ಲೂ ಸಂಚರಿಸಿ ಅದಕ್ಕೂ ಕೂಡ ಹಸುರು ವ್ಯಾಪಿಸಿದೆ. ಕಡಲಿಗೂ ಹಸಿರು ವ್ಯಾಪಿಸಿದೆ. ಎತ್ತ ನೋಡಿದರತ್ತಾ ಕಣ್ಣಿಗೆ ಹಚ್ಚಹಸುರು ಕಾಣಿಸಿದೆ. ಸರ್ವವು ಹಸುರಿನ ಭಾವ ಕವಿಯ ಮನದಲ್ಲಿ ಮೂಡಿದ್ದರಿಂದ ಒಡಲಿನಲ್ಲಿರುವ ನೆತ್ತರೂ ಹಸುರಾಗಿ ಕವಿಯಾತ್ಮಕ್ಕೂ ಹಸುರು ವ್ಯಾಪಿಸಿ ಪ್ರಕೃತಿಯೊಂದಿಗಿನ ಅದ್ವೈತಭಾವವು ಮೂಡಿಬಂದಿದೆ.

**ಅಥವಾ**

**ಕುವೆಂಪುರವರ ಪ್ರಕೃತಿ ತನ್ಮಯತೆಯ ಮಲೆನಾಡ ಸೊಬಗು ಹಸುರು ಪದ್ಯದಲ್ಲಿ ಹೇಗೆ ಚಿತ್ರಣಗೊಂಡಿದೆ ಎಂದು ವಿವರಿಸಿ.**

**ಉತ್ತರ:** ಕುವೆಂಪುರವರಿಗೆ ಪ್ರಕೃತಿಯೆಂದರೆ ಸಾಕ್ಷಾತ್ ದೇವರು. ಸದಾ ಒಂದಿಲ್ಲೊಂದು ಕವನಗಳಲ್ಲಿ ಪ್ರಕೃತಿಯ ರಮ್ಯತೆಯನ್ನು ಹೊಗಳಿದ್ದಾರೆ. ಅಂತಹ ಕವನಗಲ್ಲೊಂದಾದ 'ಹಸುರು' ಕವನವು ಆಶ್ವಯುಜ ಮಾಸದ ನವರಾತ್ರಿಯಲ್ಲಿ ಪ್ರಕೃತಿಯಲ್ಲಿ ಹೆಪ್ಪುಗಟ್ಟಿದ ಹಚ್ಚ ಹಸುರನ್ನು ಕಂಡು ಪ್ರೇರಿತವಾದ ಕವನವಾಗಿದೆ. ಈ ಕವಿತೆಯು ಕುವೆಂಪು ಅವರ 'ಪ್ರಕೃತಿ ತನ್ಮಯತೆಗೂ', ಅವರ ವಾಸಸ್ಥಳವಾದ ಮಲೆನಾಡಿನ ಸೊಬಗು ಕುಪ್ಪಳ್ಳಿಯ 'ಕವಿಶೈಲ'ದಲ್ಲಿ ಅವರಿಗುಂಟಾದ ಸೌಂದರ್ಯಾನುಭವವನ್ನು ತೋರಿಸುತ್ತದೆ.

ನೀಲವರ್ಣದ ಸಮುದ್ರದಂತಿರುವ ವನವೆಲ್ಲವೂ ಹಸುರಾಗಿದೆ. ಕವಿಯ ಆತ್ಮಕ್ಕೂ ಕೂಡ ಹಸುರು ಆವರಿಸಿದೆ. ನವರಾತ್ರಿಯಲ್ಲಿ ಹಸುರಾದ ಕವಿಯ ಹೃದಯಕ್ಕೆ ಆಗಸವು ಹಸುರಾಗಿ ಕಾಣುತ್ತದೆ. ಆಗಸದಲ್ಲಿರುವ ಮುಗಿಲು ಹಸುರಾಗಿ ಕಾಣುತ್ತಿದೆ. ಗದ್ದೆಯ ಬಯಲೆಲ್ಲ ಹಸುರಾಗಿ ಗೋಚರಿಸಿದೆ. ಮಲೆ(ಬೆಟ್ಟ), ಕಣಿವೆಗಳೆಲ್ಲವು ಹಸುರಾಗಿವೆ. ಸಂಜೆಯ ಬಿಸಿಲು ಕೂಡ ಕವಿಗೆ ಹಸುರು ಕಾಣುತ್ತಿದೆ. ಹೊಸ ಹೂವಿನ ಕಂಪಿಗೂ ಹಸುರಿನ ಆವರಿಸಿದೆ. ಬೀಸುವ ತಂಪಾದ ಗಾಳಿಗೂ ಹಸುರು ವ್ಯಾಪಿಸಿದೆ. ಹಕ್ಕಿಯ ಕೊರಳಿಂದ ಬರುವ ಇಂಪಾದ ಧ್ವನಿ ಹಸುರಾಗಿದೆ. ಇಳೆಯ ಉಸಿರು (ಗಾಳಿ) ಕವಿಯ ದೇಹದಲ್ಲೂ ಸಂಚರಿಸಿ ಅದಕ್ಕೂ ಕೂಡ ಹಸುರು ವ್ಯಾಪಿಸಿದೆ. ಕಡಲಿಗೂ ಹಸಿರು ವ್ಯಾಪಿಸಿದೆ. ಎತ್ತ ನೋಡಿದರತ್ತಾ ಕಣ್ಣಿಗೆ ಹಚ್ಚಹಸುರು ಕಾಣಿಸಿದೆ. ಸರ್ವವು ಹಸುರಿನ ಭಾವ ಕವಿಯ ಮನದಲ್ಲಿ ಮೂಡಿದ್ದರಿಂದ ಒಡಲಿನಲ್ಲಿರುವ ನೆತ್ತರೂ ಹಸುರಾಗಿ ಕವಿಯಾತ್ಮಕ್ಕೂ ಹಸುರು ವ್ಯಾಪಿಸಿದೆ. ಹೀಗೆ ಕುವೆಂಪುರವರ ಪ್ರಕೃತಿ ತನ್ಮಯತೆಯ ಮಲೆನಾಡ ಸೊಬಗು ಹಸುರು ಪದ್ಯದಲ್ಲಿ ಹೇಗೆ ಚಿತ್ರಣಗೊಂಡಿದೆ.

**XIII. ಈ ಕೆಳಗಿನ ಗದ್ಯಭಾಗವನ್ನು ಮನಸ್ಸಿನಲ್ಲಿ ಓದಿಕೊಂಡು, ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ :** 2 X 2 = 4

ಚಾರ್ಲಿ ಚಾಪ್ಲಿನ್‌ನ ಕಲಾವಂತಿಕೆ ಎಲ್ಲಾ ದೇಶಗಳ ಜನರನ್ನು ಮುಗ್ಧಗೊಳಿಸಿದೆ. ಏಷ್ಯಾದ ಜನಸ್ತೋಮ, ಯುರೋಪಿನ ಜನತೆ, ಆಫ್ರಿಕದ ನೀಗ್ರೋಗಳು – ಎಲ್ಲರಿಗೂ ಅವರು ಪ್ರಿಯರಾಗಿರುವುದಕ್ಕೆ ಅವರ ಈ ಮಾನವತೆಯೇ ಕಾರಣ. ಚಲನಚಿತ್ರದ ಭಾಷೆ ಆಡುವ ಮಾತಿನ ಭಾಷೆಯಲ್ಲ. ಅದು ನಾಟಕದ ಭಾಷೆಯಾಯಿತು. ಆದರೆ ಚಲನಚಿತ್ರ ಒಂದು ಹೊಸ ಕಲಾಪ್ರಕಾರ, ಈ ಹೊಸ ಕಲಾಪ್ರಕಾರಕ್ಕೆ ಹೊಸ ಭಾಷೆಯೇ ಬೇಕು. ಈ ಭಾಷೆ ಆಡುವ ಮಾತಿನದಲ್ಲ, ಅಭಿನಯದ್ದು, ಸನ್ನೆಯದು. ಇದು ಚಾರ್ಲಿ ಚಾಪ್ಲಿನ್ರ ಅಭಿಪ್ರಾಯ. ಆದರೆ ಹಲವು ಚಲನಚಿತ್ರ ತಯಾರಕರು ಇದನ್ನರಿತಿಲ್ಲ. ಆಡುವ ಮಾತಿಗೆ ಅವರು ಅಭಿನಯವನ್ನು ಹೊಂದಿಸುತ್ತಾರೆ. ಚಾರ್ಲಿಯ ಚಿತ್ರದಲ್ಲಿ ತದ್ವಿರುದ್ಧ ಅಭಿನಯವೇ ಪ್ರಧಾನ; ಮಾತು ಗೌಣ; ಅದು ಇಲ್ಲದಿದ್ದರೂ ಸರಿಯೇ. ಅಂತೆಯೇ ಚಾಪ್ಲಿನ್ರ ದೇಹದ ಪ್ರತಿಭಾಗವೂ

ಪ್ರೇಕ್ಷಕರಿಗೆ ಭಾವಸಮಾರಾಧನೆಯ ಅಭಿನಯ ನೀಡುತ್ತದೆ. ಅವರ ದೇಹ ವೀಣೆಯಂತೆ ಮಿಡಿಯುವ ತಂತಿ, ಮಾತಿಗೆ । ಮೀರಿದ ಭಾವಪ್ರಕಟ–ಅಂತಃಕರಣಕ್ಕೆ ತಾಗುವ ರಸದೌತಣ–ಇದು ಅವರ ಗುರಿ. ಅವರ ಚಿತ್ರ ಪರದೆಯ ಮೇಲೆ ಬೀಳುವ ನಿರ್ಜಿವ ಛಾಯೆಯಲ್ಲ, ಅದು ಸಜೀವ, ಬೇಕಾದರೆ ನೀವು ಚಾರ್ಲಿಗೆ ಕಚಗುಳಿಯಿಡಬಹುದು. ಅವರನ್ನು ಅಳಿಸಬಹುದು, ಉದ್ರೇಕಗೊಳಿಸಬಹುದು ಎನ್ನುವಷ್ಟು ಸಜೀವ, ಮಾತಿಗೆ ಮೀರಿದ ಈ ಅಭಿನಯ ಚಾತುರ್ಯದಿಂದಲೇ ಚಾರ್ಲಿ ಚಾಪ್ಲಿನ್ ಎಲ್ಲಾ ದೇಶಗಳ, ಎಲ್ಲಾ ವರ್ಗಗಳ ಜನರಿಗೂ ಪ್ರಿಯರಾಗಿರುವುದು.

ಎ.ಜಿ. ಗಾರ್ಡಿನರ್ ಎಂಬ ಲೇಖಕರು ಚಾರ್ಲಿ ಚಾಪ್ಲಿನರನ್ನು ಚಾರ್ಲ್ಸ್ ಡಿಕನ್ಸ್‌ಗೆ ಹೋಲಿಸುತ್ತಾರೆ. ಇಬ್ಬರೂ ಮಾನವತಾವಾದಿಗಳು. ಇಬ್ಬರೂ ಬಡತನದಲ್ಲಿ ಬೆಳೆದವರು. ಆದರೆ ಡಿಕನ್ಸ್ ಲೇಖಕ, ಚಾರ್ಲಿ ಚಾಪ್ಲಿನ್ ಚಲನಚಿತ್ರ ನಟ. ಚಲನಚಿತ್ರದ ಅವತಾರವಾಗದಿದ್ದರೆ ಚಾಪ್ಲಿನ್ ಬಹುಶಃ ಲೇಖಕರೋ, ರಂಗಭೂಮಿಯ ನಟರೋ ಆಗುತ್ತಿದ್ದರೇನೋ ಎಂದು ಊಹಿಸುವುದು ಕಷ್ಟ. ಅಂತಹ ಚಾಪ್ಲಿನ್, ಡಿಕನ್ಸ್ ಇಬ್ಬರೂ ಬಡತನದ ಆಡುಂಬೊಲದಲ್ಲಿ ಆಟವಾಡಿದರು. ಸಾಮಾನ್ಯ ಜನರನ್ನು, ಸಂತೆಯ ನೆರವಿಯನ್ನು, ಪತಿತರನ್ನು ಚಿತ್ರಿಸುವುದರಲ್ಲೇ–ಇಬ್ಬರಿಗೂ ಆಸಕ್ತಿ, ಡಿಕನ್ಸ್ ಕಾದಂಬರಿಗಳನ್ನು ಓದಿದಾಗ ಆತನ ಪಾತ್ರ ನಿರೂಪಣಾ ಕೌಶಲವನ್ನು, ಆತ ರಚಿಸಿರುವ ಪಾತ್ರ ವೈವಿಧ್ಯವನ್ನೂ ಕಂಡು ಬೆರಗಾಗುತ್ತದೆ. ಜನ ಜಂಗುಳಿಯ ಅಳು–ನಗು, ಕೋಪ–ಕನಿಕರ, ದ್ವೇಷ–ಸ್ನೇಹ, ಮಮತೆ–ಮಾತ್ಸರ್ಯ, ಮಿತಿ–ವೈಪರೀತ್ಯ ಇವುಗಳನ್ನು ಕಂಡು ಅಂತಃಕರಣ ಮೃದುವಾಗುತ್ತದೆ. ಕೊನೆಗೆ ಹೊರಡುವುದು ಒಂದು ನಿಟ್ಟುಸಿರು, ಅಸಹಾಯಕತೆಯ ಉದ್ಗಾರ. ಈ ಜಂಗುಳಿಯಲ್ಲಿ ವ್ಯಕ್ತಿಶಃ ಒಬ್ಬೊಬ್ಬರೂ ಸನ್ನಿವೇಶದ ಶಿಶುಗಳು. ಅವರ ಬವಣೆಯನ್ನು ಕಂಡು ಮರುಗಬೇಕಷ್ಟೆ, ಬಿಡುಗಡೆ ? ಎಂದೋ ಹೇಗೋ–ಯಾರು ಬಲ್ಲರು ? ಡಿಕನ್ಸ್ ಊಹೆಗೆ ನಿಲುಕದ ವಿಷಯ ಅದು.

**43. ಪ್ರಶ್ನೆಗಳು :**

**ಅ) ಚಾರ್ಲಿ ಚಾಪ್ಲಿನ್ ಚಲನಚಿತ್ರವನ್ನು ಒಂದು ಹೊಸ ಕಲಾಪ್ರಕಾರವಾಗಿ ಹೇಗೆ ರೂಪುಗೊಳಿಸಿದರು ?**

**ಉತ್ತರ:** ಚಾರ್ಲಿ ಚಾಪ್ಲಿನ್‌ನ ಕಲಾವಂತಿಕೆ ಎಲ್ಲಾ ದೇಶಗಳ ಜನರನ್ನು ಮುಗ್ಧಗೊಳಿಸಿದೆ. ಚಲನಚಿತ್ರ ಒಂದು ಹೊಸ ಕಲಾಪ್ರಕಾರ, ಈ ಹೊಸ ಕಲಾಪ್ರಕಾರಕ್ಕೆ ಹೊಸ ಭಾಷೆಯೇ ಬೇಕು. ಈ ಭಾಷೆ ಆಡುವ ಮಾತಿನದಲ್ಲ, ಅಭಿನಯದ್ದು, ಸನ್ನೆಯದು. ಚಾರ್ಲಿಯ ಚಿತ್ರದಲ್ಲಿ ಅಭಿನಯವೇ ಪ್ರಧಾನ; ಮಾತು ಗೌಣ; ಅದು ಇಲ್ಲದಿದ್ದರೂ ಸರಿಯೇ. ಅಂತೆಯೇ ಚಾಪ್ಲಿನ್ ದೇಹದ ಪ್ರತಿಭಾಗವೂ ಪ್ರೇಕ್ಷಕರಿಗೆ ಭಾವಸಮಾರಾಧನೆಯ ಅಭಿನಯ ನೀಡುತ್ತದೆ. ಅವರ ದೇಹ ವೀಣೆಯಂತೆ ಮಿಡಿಯುವ ತಂತಿ, ಮಾತಿಗೆ ಮೀರಿದ ಭಾವಪ್ರಕಟ–ಅಂತಃಕರಣಕ್ಕೆ ತಾಗುವ ರಸದೌತಣ–ಇದು ಅವರ ಗುರಿ. ಅವರ ಚಿತ್ರ ಪರದೆಯ ಮೇಲೆ ಬೀಳುವ ನಿರ್ಜಿವ ಛಾಯೆಯಲ್ಲ, ಅದು ಸಜೀವ, ಬೇಕಾದರೆ ನೀವು ಚಾರ್ಲಿಗೆ ಕಚಗುಳಿಯಿಡಬಹುದು. ಅವರನ್ನು ಅಳಿಸಬಹುದು, ಉದ್ರೇಕಗೊಳಿಸಬಹುದು ಎನ್ನುವಷ್ಟು ಸಜೀವ, ಮಾತಿಗೆ ಮೀರಿದ ಈ ಅಭಿನಯ ಚಾತುರ್ಯದಿಂದಲೇ ಚಾರ್ಲಿ ಚಾಪ್ಲಿನ್ ಚಲನಚಿತ್ರವನ್ನು ಒಂದು ಹೊಸ ಕಲಾಪ್ರಕಾರವಾಗಿ ರೂಪುಗೊಳಿಸಿದರು.

**ಬ) ಚಾರ್ಲಿ ಚಾಪ್ಲಿನ್ ಮತ್ತು ಚಾರ್ಲ್ಸ್ ಡಿಕನ್ಸ್ ಇವರಿಬ್ಬರಲ್ಲಿರುವ ಸಾಮ್ಯತೆಗಳನ್ನು ತಿಳಿಸಿ.**

**ಉತ್ತರ:** ಎ.ಜಿ. ಗಾರ್ಡಿನರ್ ಎಂಬ ಲೇಖಕರು ಚಾರ್ಲಿ ಚಾಪ್ಲಿನರನ್ನು ಚಾರ್ಲ್ಸ್ ಡಿಕನ್ಸ್‌ಗೆ ಹೋಲಿಸುತ್ತಾರೆ. ಇಬ್ಬರೂ ಮಾನವತಾವಾದಿಗಳು. ಇಬ್ಬರೂ ಬಡತನದಲ್ಲಿ ಬೆಳೆದವರು. ಆದರೆ ಡಿಕನ್ಸ್ ಲೇಖಕ, ಚಾರ್ಲಿ ಚಾಪ್ಲಿನ್ ಚಲನಚಿತ್ರ ನಟ. ಚಲನಚಿತ್ರದ ಅವತಾರವಾಗದಿದ್ದರೆ ಚಾಪ್ಲಿನ್ ಬಹುಶಃ ಲೇಖಕರೋ, ರಂಗಭೂಮಿಯ ನಟರೋ ಆಗುತ್ತಿದ್ದರೇನೋ ಎಂದು ಊಹಿಸುವುದು ಕಷ್ಟ. ಅಂತಹ ಚಾಪ್ಲಿನ್, ಡಿಕನ್ಸ್ ಇಬ್ಬರೂ ಬಡತನದ ಆಡುಂಬೊಲದಲ್ಲಿ ಆಟವಾಡಿದರು. ಸಾಮಾನ್ಯ ಜನರನ್ನು, ಸಂತೆಯ ನೆರವಿಯನ್ನು, ಪತಿತರನ್ನು ಚಿತ್ರಿಸುವುದರಲ್ಲೇ–ಇಬ್ಬರಿಗೂ ಆಸಕ್ತಿ. ಹೀಗೆ ಅವರಿಬ್ಬರಲ್ಲಿನ ಸಾಮತ್ಯೆಗಳನ್ನು ಕಾಣಬಹುದು.

**XIV. ಈ ಕೆಳಗಿನ ಯಾವುದಾದರೂ ಒಂದಕ್ಕೆ ಕೊಟ್ಟಿರುವ ಮಾಹಿತಿಯನ್ನು ಆಧರಿಸಿ ಪತ್ರ ಬರೆಯಿರಿ :** 1 X 5 = 5

44. **ನಿಮ್ಮನ್ನು ಬಾಗಲಕೋಟೆಯ ಸರ್ಕಾರಿ ಪ್ರೌಢಶಾಲೆಯ "ಸೃಜನ್" ಎಂದು ಭಾವಿಸಿಕೊಂಡು ಅತಿವೃಷ್ಟಿಯಿಂದಾದ ತೊಂದರೆಗಳಿಗೆ ಪರಿಹಾರ ಕಾರ್ಯಗಳನ್ನು ಕೈಗೊಳ್ಳುವಂತೆ ಜಿಲ್ಲಾಧಿಕಾರಿಗಳಿಗೆ ಮನವಿ ಪತ್ರವನ್ನು ಬರೆಯಿರಿ.**

**ಇವರಿಂದ**

ಸೃಜನ್
10ನೇ ತರಗತಿ
ಸರ್ಕಾರಿ ಪ್ರೌಢಶಾಲೆ
ಬಾಗಲಕೋಟೆ

**ಇವರಿಗೆ**

ಜಿಲ್ಲಾಧಿಕಾರಿಗಳು
ಬಾಗಲಕೋಟೆ ಜಿಲ್ಲೆ

ಮಾನ್ಯರೆ,

**ವಿಷಯ :** ಅತಿವೃಷ್ಟಿಯಿಂದಾದ ತೊಂದರೆಗಳಿಗೆ ಪರಿಹಾರ ಕಾರ್ಯಗಳನ್ನು ಕೈಗೊಳ್ಳುವಂತೆ ಮನವಿ

ಈ ಮೂಲಕ ತಮ್ಮಲ್ಲಿ ತಿಳಿಸುವುದೇನೆಂದರೆ ಈ ಹಿಂದಿನ ತಿಂಗಳು ಉಂಟಾದ ಅತಿವೃಷ್ಟಿಯಿಂದ ನಮ್ಮ ಜಿಲ್ಲೆಯ ಸಾಕಷ್ಟು ಪ್ರದೇಶಗಳಿಗೆ ಹಾನಿಯಾಗಿದೆ. ಸಾಕಷ್ಟು ಜನರು ಮನೆ– ಮಠಗಳನ್ನು ಕಳೆದುಕೊಂಡು ನಿರಾಶ್ರಿತರಾಗಿದ್ದಾರೆ ಅನ್ನ ನೀರಿಲ್ಲದೆ ಕಷ್ಟಗಳನ್ನು ಅನುಭವಿಸುತ್ತಿದ್ದಾರೆ. ವಿದ್ಯುತ್ ಕಂಬಗಳು ಧರೆಗುರುಳಿ ಕತ್ತಲಲ್ಲಿ ಕಾಲ ಕಳೆಯುವಂತಾಗಿದೆ. ಆದ್ದರಿಂದ ದಯಮಾಡಿ ಆದಷ್ಟು ಬೇಗನೆ ಪರಿಹಾರಕಾರ್ಯಗಳನ್ನು ಕೈಗೊಂಡು ನಮ್ಮ ಊರಿನ ಜನರಿಗೆ ಸಹಾಯಮಾಡಬೇಕೆಂದು ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತಿದ್ದೇನೆ.

ವಂದನೆಗಳೊಂದಿಗೆ

ಸ್ಥಳ: ಬಾಗಲಕೋಟೆ
ದಿನಾಂಕ : 17–02–2020

ತಮ್ಮ ವಿಶ್ವಾಸಿ
ಸೃಜನ್

**ಅಥವಾ**

**ನಿಮ್ಮನ್ನು ರಾಯಚೂರಿನ ಸರ್ಕಾರಿ ಪ್ರೌಢಶಾಲೆಯ 'ಸುಬೋಧ' ಎಂದು ಭಾವಿಸಿಕೊಂಡು ಶಾಲೆಯಲ್ಲಿ ಕೈಗೊಂಡ ಶಾಲಾ ಶೈಕ್ಷಣಿಕ ಪ್ರವಾಸದ ಅನುಭವಗಳನ್ನು ವಿವರಿಸಿ ಕಲಬುರಗಿಯ ಶರಣಬಸವೇಶ್ವರ ಬಡಾವಣೆಯಲ್ಲಿ ವಾಸವಾಗಿರುವ 'ರಮೇಶ' ಎಂಬ ಹೆಸರಿನ ಗೆಳೆಯನಿಗೊಂದು ಪತ್ರವನ್ನು ಬರೆಯಿರಿ.**

ಸುಬೋಧ
10ನೇ ತರಗತಿ
ಸರ್ಕಾರಿ ಪ್ರೌಢಶಾಲೆ
ರಾಯಚೂರು
ದಿನಾಂಕ : 17.02.2020

ನನ್ನ ಪ್ರೀತಿಯ ಗೆಳಯ ರಮೇಶ,

ನಾನು ಇಲ್ಲಿ ಆರೋಗ್ಯವಾಗಿದ್ದೇನೆ. ನೀನು ಆರೋಗ್ಯವಾಗಿದ್ದೀಯಾ ಎಂದು ಭಾವಿಸಿರುತ್ತೇನೆ. ಗೆಳೆಯ ನಾವು ದಿನಾಂಕ 10.01.2020 ರಿಂದ 12.01.2020 ರ ವರೆಗೆ ಬೇಲೂರು, ಹಳೆಬೀಡು, ಶ್ರವಣಬೆಳಗೊಳ, ಮೈಸೂರು, ತಲಕಾಡು ಮುಂತಾದ ಸ್ಥಳಗಳಿಗೆ ಶಾಲಾ ಶೈಕ್ಷಣಿನ ಪ್ರವಾಸ ಹೋಗಿದ್ದೆವು. ದೇಶ ಸುತ್ತು ಕೋಶ ಓದು ಎನ್ನುವ ಮಾತಿನಂತೆ ಈ ಸ್ಥಳಗಳಿಗೆ ಹೋದ ಪ್ರವಾಸ ಸಾಕಷ್ಟು ಅನುಭವ ಮತ್ತು ಜ್ಞಾನವನ್ನು ನೀಡಿತು. ಬೇಲೂರಿನ ಚೆನ್ನಕೇಶವ ನೋಡಲು ಬಲು ಸುಂದರವಾಗಿತ್ತು. ಹೊಯ್ಸಳರ ಕಾಲದ ಶಿಲ್ಪಕಲಾ ಶೈಲಿ ಕಣ್ಮನ ತಣಿಸಿತು. ಶ್ರವಣಬೆಳಗೊಳದ ವೈರಾಗ್ಯ ಮೂರ್ತಿ, ಏಕಶಿಲಾ ಮೂರ್ತಿಯಾದ ಬಾಹುಬಲಿಯನ್ನು ನೋಡಿ ಚಾವುಂಡರಾಯನಿಗೆ ಕೃತಜ್ಞತೆಯನ್ನು ಸಲ್ಲಿಸಿದೆವು. ಮೈಸೂರಿನ ಸುಂದರ ಅರಮನೆ ನಮ್ಮೆಲ್ಲರನ್ನು ದಂಗು ಬಡಿಸಿತು. ಅರಸರ ಸುಂದರ ಜೀವನಕ್ಕೆ ಸಾಕ್ಷಿಯಾಗಿದೆ. ತಲಕಾಡಿನ ದೇವಸ್ಥಾನಗಳು ವೈಭವದಿಂದ ಕೂಡಿವೆ. ಇವೆಲ್ಲ ಸ್ಥಳಗಳು ನಿಜಕ್ಕೂ ನಮ್ಮ

ಇತಿಹಾಸದ , ಸಂಸ್ಕೃತಿಯ ಹೆಗ್ಗುರುತುಗಳಾಗಿವೆ ಎಂದು ಹೇಳಲು ಇಷ್ಟಪಡುತ್ತೇನೆ. ಗೆಳೆಯ ನೀನೂ ಕೂಡ ಇಂತಹ ಸ್ಥಳಗಳನ್ನು ನೋಡಬೇಕೆಂದು ತಿಳಿಸುತ್ತೇನೆ.

ಶುಭಾಶಯಗಳೊಂದಿಗೆ

ನಿನ್ನ ಪ್ರೀತಿಯ ಗೆಳೆಯ
ಸುಬೋಧ

**ಹೊರವಿಳಾಸ**

ರಮೇಶ
ಶರಣಬಸವೇಶ್ವರ ಬಡಾವಣೆ
ಮನೆ ನಂ–100
ಕಲಬುರಗಿ – 583201

**XV. ಈ ಕೆಳಗಿನ ಯಾವುದಾದರೂ ಒಂದು ವಿಷಯಕ್ಕೆ ಹದಿನೈದು ವಾಕ್ಯಗಳಿಗೆ ಕಡಿಮೆಯಿಲ್ಲದಂತೆ ಪ್ರಬಂಧ ಬರೆಯಿರಿ :**

1 X 5 = 5

**45. ಕರ್ನಾಟಕದ ಪ್ರಾಕೃತಿಕ ಸಂಪತ್ತು**

**ಪೀಠಿಕೆ :** ಕರ್ನಾಟಕ ಐತಿಹಾಸಿಕ ಮತ್ತು ಸಾಂಸ್ಕೃತಿಕ ಪರಂಪರೆಗಳಿಂದ ಹೇಗೆ ಸಂಪದ್ಭರಿತ ನಾಡಾಗಿದೆಯೋ ಅದೇ ರೀತಿ ಪ್ರಾಕೃತಿಕ ಸಂಪತ್ತಿನಿಂದಲೂ ಪ್ರಸಿದ್ಧವಾಗಿದೆ. ನೈಸರ್ಗಿಕವಾಗಿ ನಮಗೆ ದೊರೆಯಬಹುದಾದ ಸಂಪತ್ತನ್ನು ಪ್ರಾಕೃತಿಕ ಸಂಪತ್ತು ಎಂದು ಕರೆಯುತ್ತೇವೆ.

**ವಿಷಯ ನಿರೂಪಣೆ :** ಕರ್ನಾಟಕ ಖನಿಜ ಸಂಪತ್ತು, ಜಲಸಂಪತ್ತು, ಸಸ್ಯ ಸಂಪತ್ತು , ಅರಣ್ಯ ಸಂಪತ್ತುಗಳಿಂದ ತುಂಬಿದೆ. ಶ್ರೀಗಂಧದ ನಾಡು – ಚಿನ್ನದ ಬೀಡು ಎಂದು ಪ್ರಸಿದ್ಧಿಯಾಗಿರುವಂತಹದ್ದು. ಇಂತಹ ಪ್ರಾಕೃತಿಕ ಸಂಪತ್ತು ನಮ್ಮ ನಾಡಿನ ಏಳಿಗೆಗೆ ಭದ್ರಬುನಾದಿ ಒದಗಿಸಿದೆ.

ಇಡಿ ಭಾರತದಲ್ಲಿ ದೊಡ್ಡ ಪ್ರಮಾಣದಲ್ಲಿ ಚಿನ್ನದ ಪ್ರಾಕೃತಿಕ ನಿಕ್ಷೇಪಗಳಿರುವುದು ನಮ್ಮ ಕರ್ನಾಟಕ ರಾಜ್ಯವಾಗಿದೆ. ಭಾರತದಲ್ಲಿ ಚಿನ್ನವನ್ನು ಉತ್ಪಾದಿಸುವ ಏಕೈಕ ರಾಜ್ಯ ನಮ್ಮ ಕರ್ನಾಟಕ. ಜೀವಿ ಸಂಕುಲಗಳ ವೈವಿಧ್ಯಕ್ಕೆ ಹೆಸರಾಗಿದೆ. ಜೀವ ನದಿಗಳ ಉಗಮ ಸ್ಥಾನವಾಗಿದೆ. ಕಾವೇರಿ, ಕೃಷ್ಣ, ಕಬಿನಿ, ಗೋದಾವರಿ, ವೇದಾವತಿ ,ಭೀಮಾನದಿ, ಹೇಮಾವತಿ, ತುಂಗಭದ್ರ, ಘಟಪ್ರಭ, ಮಲಪ್ರಭ ಮುಂತಾದ ನದಿಗಳಿಂದ ಜೀವಜಲಕ್ಕೆ ಆಸರೆಯಾಗಿವೆ. ವನಸಿರಿಯ ದಟ್ಟ ಸೊಬಗು ಕಣ್ಣಿಗೆ ಕಟ್ಟುತ್ತದೆ. ಭೂಮಿ ಅರಣ್ಯ , ಖನಿಜ , ಜಲಮೂಲ ಮುಂತಾದ ಗಣನೀಯ ಪ್ರಮಾಣದ ಬರಿದಾಗದ ಸಂಪನ್ಮೂಲಗಳನ್ನು ಕರ್ನಾಟಕವು ಪಡೆದಿದೆ.

ಕರ್ನಾಟಕವು ಸಮೃದ್ಧ ಮತ್ತು ವೈವಿಧ್ಯಮಯ ಔಷಧ ಸಸ್ಯಗಳಿಗೆ ಹೆಸರುವಾಸಿಯಾಗಿದೆ. ಇತಿಹಾಸ ಕಾಲದಿಂದಲೂ ವಿಶ್ವಖ್ಯಾತಿಯ ಗಂಧದ ಮರ, ಗಂಧದ ಎಣ್ಣೆ , ತೇಗದದ ಮರ ಮಸಾಲೆ ಪದಾರ್ಥಗಳು , ಮತ್ತು ಚಿನ್ನಕ್ಕೆ ಇದು ತವರಿನಂತಿದೆ. ಕಬ್ಬಿಣದ ಅದಿರು, ತಾಮ್ರದ ಅದಿರು , ಮ್ಯಾಂಗ್ ನೀಸ್ ಇನ್ನೂ ಮುಂತಾದ ಖನಿಜಗಳ ಗಣಿಯಾಗಿದೆ ಎಂದು ಹೇಳಬಹುದು. ಸಿಮೆಂಟ್ ಕಾರ್ಖಾನೆಗಳಿಗೆ ಬೆನ್ನೆಲುಬಾದ ಸುಣ್ಣಶಿಲಾ ನಿಕ್ಷೇಪಗಳು ಹೇರಳವಾಗಿವೆ. ಹೀಗೆ ಅನೇಕ ಪ್ರಾಕೃತಿಕ ಸಂಪತ್ತಿನ ನೆಲೆ ಕರ್ನಾಟಕವಾಗಿದೆ.

**ಉಪಸಂಹಾರ:** ಮಾನವನ ದುರಾಸೆಯಿಂದ ಇಂದು ಪ್ರಾಕೃತಿಕ ಸಂಪತ್ತು ಬರಿದಾಗ ತೊಡಗಿದೆ. ಮುಖ್ಯವಾಗಿ ಜಲಸಂಪತ್ತು , ಅರಣ್ಯ ಸಂಪತ್ತುಗಳನ್ನು ಹೆಚ್ಚಿಸಬೇಕಾಗಿದೆ. ಪ್ರಾಕೃತಿಕ ಸಂಪತ್ತನ್ನು ಉಳಿಸುವ ಬಗ್ಗೆ ಎಚ್ಚರಗೊಳ್ಳದಿದ್ದರೆ ಮನುಷ್ಯ ಸೇರಿದಂತೆ ಪ್ರಾಣಿ, ಪಕ್ಷಿ ಜೀವ ಸಂಕುಲಗಳಿಗೆ ಅಪಾಯ ಕಟ್ಟಿಟ್ಟ ಬುತ್ತಿ ಎಂದರು ತಪ್ಪಾಗದು. ಪ್ರಾಕೃತಿಕ ಸಂಪತ್ತನ್ನು ಬರಿದಾಗಿಸದೆ ಮುಂದಿನ ಪೀಳಿಗೆಗೆ ಉಳಿಸಿ ಬೆಳೆಸಿಕೊಂಡು ಹೋಗುವುದು ನಮ್ಮ ನಿಮ್ಮೆಲ್ಲರ ಕರ್ತವ್ಯವಾಗಿದೆ.

**ಅಥವಾ**

**ಹೆಣ್ಣು ಮಕ್ಕಳಿಗೆ ಸರ್ಕಾರದ ಸೌಲಭ್ಯಗಳು.**

**ಪೀಠಿಕೆ:** ಹೆಣ್ಣುಮಕ್ಕಳಲ್ಲಿ ಮಾನಸಿಕವಾಗಿ , ಬೌದ್ಧಿಕವಾಗಿ, ಆರ್ಥಿಕವಾಗಿ, ಸಾಮಾಜಿಕವಾಗಿ, ರಾಜಕೀಯವಾಗಿ ಸಬಲತೆವನ್ನು ಹೆಚ್ಚಿಸಿ ಅವರು ಆತ್ಮ ವಿಶ್ವಾಸವನ್ನು ಹೊಂದುವಂತೆ ಮಾಡಲು ಇಂದು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಮಹಿಳೆಯರಿಗೆ ಪ್ರಾಧಾನ್ಯತೆ ನೀಡುವ ಹಲವಾರು ಯೋಜನೆಗಳನ್ನು ಹಾಕಿಕೊಂಡಿವೆ.

**ವಿಷಯ ನಿರೂಪಣೆ :** ರಾಜಕೀಯವಾಗಿ, ಸಾಮಾಜಿಕವಾಗಿ, ಔದ್ಯೋಗಿಕವಾಗಿ ಮೀಸಲಾತಿ ಸೌಲಭ್ಯವನ್ನು ಒದಗಿಸಿ ಕೊಟ್ಟಿವೆ. ಕುಟುಂಬ ಯೋಜನೆಯನ್ನು ಅಳವಡಿಸಿಕೊಳ್ಳುವ , ಬಡತನ ರೇಖೆಗಿಂತ ಕೆಳಗಿರುವ ಹೆಣ್ಣು ಮಕ್ಕಳ ಮೊದಲ ಎರಡು ಹೆಣ್ಣು ಮಕ್ಕಳಿಗೆ ಭಾಗ್ಯಲಕ್ಷ್ಮಿ ಯೋಜನೆಯನ್ನು ನೀಡಲಾಗಿದೆ. ಸಮಗ್ರ ಮಕ್ಕಳ ಅಭಿವೃದ್ಧಿ ಯೋಜನೆಯಡಿಯಲ್ಲಿ ಗರ್ಭಿಣಿ ಮತ್ತು ಬಾಣಂತಿಯರ ಆರೋಗ್ಯ, ಶಿಶುಗಳ ಆರೋಗ್ಯ, ಆರೈಕೆಗೆ ಸಂಬಂಧಿಸಿದ ಕಾರ್ಯಗಳನ್ನು ಮಾಡಲಾಗುತ್ತದೆ. ಅಂಗನವಾಡಿ ಕೇಂದ್ರಗಳ ಮೂಲಕ ಗರ್ಭಿಣಿಯರಿಗೆ , ಹದಿಹರೆಯದ ಹೆಣ್ಣು ಮಕ್ಕಳಿಗೆ ಪೌಷ್ಠಿಕ ಆಹಾರವನ್ನು ಒದಗಿಸಲಾಗುತ್ತದೆ. ಪ್ರಾಥಮಿಕ ಆರೋಗ್ಯ ಕೇಂದ್ರಗಳ ಮೂಲಕ ಗರ್ಭಿಣಿ ಮಹಿಳೆಯರಿಗೆ ಮತ್ತು ಹಾಲುಣಿಸುವ ತಾಯಂದಿರಿಗೆ ಉಚಿತ ಆರೋಗ್ಯ ತಪಾಸಣೆ , ಲಸಿಕೆಗಳನ್ನು ನೀಡಲಾಗುತ್ತದೆ. ಜನನಿ ಸುರಕ್ಷಾ ಯೋಜನೆ ಮುಂತಾದ ಯೋಜನೆಗಳಿವೆ.

ಒಂದನೆಯ ತರಗತಿಯಿಂದ ಉನ್ನತ ಶಿಕ್ಷಣದವರೆಗೂ ಉಚಿತ ಶಿಕ್ಷಣವನ್ನು ನೀಡಲಾಗುತ್ತದೆ. ವಿದ್ಯಾರ್ಥಿನಿಯರಿಗೆ ಉಚಿತ ಸೈಕಲ್, ಸಮವಸ್ತ್ರ, ಪಠ್ಯಪುಸ್ತಕ, ಬಿಸಿಯೂಟ, ಕ್ಷೀರಭಾಗ್ಯ ಮುಂತಾದ ಸೌಲಭ್ಯಗಳನ್ನು ನೀಡಲಾಗುತ್ತದೆ. ಕೆಲಸ ಮಾಡುವ ಮಹಿಳೆಯರ ಮಕ್ಕಳ ಪಾಲನೆಗಾಗಿ ಶಿಶುಧಾಮಗಳನ್ನು ಸ್ಥಾಪಿಸಲಾಗಿದೆ. ಮಹಿಳೆಯರಿಗೆ ವಸತಿ ವ್ಯವಸ್ಥೆಯನ್ನು ಕೂಡ ಮಾಡಲಾಗಿದೆ. ಹೆಣ್ಣು ಮಕ್ಕಳ ರಕ್ಷಣೆಗಾಗಿ ಬೇಟಿ ಬಚಾವೋ ಬೇಟಿ ಪಡಾವೋ ಎಂಬ ಯೋಜನೆಯನ್ನು ಜಾರಿಗೊಳಿಸಲಾಗಿದೆ. ಮಹಿಳೆಯರು ಸ್ವಂತ ಉದ್ಯೋಗವನ್ನು ಕೈಗೊಳ್ಳಬೇಕೆಂದು ಕರ್ನಾಟಕ ಮಹಿಳಾಭಿವೃದ್ಧಿ ಪ್ರಾಧಿಕಾರದ ಮೂಲಕ ಉದ್ಯೋಗಿನಿ ಯೋಜನೆಯನ್ನು ಜಾರಿಗೆ ತರಲಾಗಿದೆ. ನಿರಾಶ್ರಿತ ಮಹಿಳೆಯರ ರಕ್ಷಣೆಗಾಗಿ ಸಾಂತ್ವಾನ ಕೇಂದ್ರಗಳನ್ನು ಸ್ಥಾಪಿಸಲಾಗಿದೆ. ನಿರ್ಗತಿಕ , ವಿಧವಾ, ಮಾನಸಿಕವಾಗಿ ಅಸ್ವಸ್ಥರಾಗಿರುವ ಮಹಿಳೆರಿಗಾಗಿ ಆಹಾರ, ವಸತಿ, ಬಟ್ಟೆ, ಆರೋಗ್ಯ, ರಕ್ಷಣೆ, ಸಮಲೋಚನೆ, ಕಾನೂನು ನೆರವು, ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಮುಂದೆ ಬರಲು ತರಬೇತಿಯಂತಹ ಸೇವೆಗಳನ್ನು ಸ್ವಾಧಾರ್ ಕೇಂದ್ರಗಳ ಮೂಲಕ ನೀಡಲಾಗುತ್ತದೆ. ಮಹಿಳೆಯರ ಆರ್ಥಿಕ ಸ್ವಾಲಂಬನೆಗಾಗಿ ಸ್ತ್ರೀಶಕ್ತಿ ಸಂಘಗಳ ಮೂಲಕ ಸಾಲ ಸೌಲಭ್ಯಗಳನ್ನು ನೀಡಲಾಗುತ್ತದೆ. ಸುಖನ್ಯಾ ಸಮೃದ್ಧಿ ಯೋಜನೆ ,ವಿಧವಾ ವೇತನಾ ಮುಂತಾದ ಯೋಜನೆಗಳಿವೆ.

**ಉಪಸಂಹಾರ:** ತೊಟ್ಟಿಲನ್ನು ತೂಗುವ ಕೈ ಜಗತ್ತನ್ನೆ ಆಳಬಲ್ಲದು. ಆದ್ದರಿಂದ ಮಹಿಳೆಯರ ಸಬಲೀಕರಣವಾದರೆ ಜಗತ್ತು ಉದ್ದಾರವಾದೀತು. ಮಹಿಳೆಯರ ಸಶಕ್ತರಾದರೆ ದೇಶವೂ ಸಶಕ್ತವಾಗುತ್ತದೆ. ಆದ್ದರಿಂದ ಮಹಿಳೆಯರಿಗೆ ಸಬಲರಾಗಲೂ ಅವಕಾಶ ನೀಡಬೇಕು. ಒಬ್ಬ ಮಹಿಳೆಯು ಶಕ್ತಿವಂತಳಾಗಿ, ಸ್ವತಂತ್ರವಾಗಿ ತನ್ನ ಇಚ್ಚೆಯಂತೆ ಸ್ವಾವಲಂಬಿಯಾಗಿ ಬಾಳುವ ಸ್ಥಿತಿಯನ್ನು ಅವರಿಗೆ ನೀಡಿದಾಗ ಮಹಿಳಾ ಸಬಲೀಕರಣ ಸಾಧ್ಯವೆಂದು ಹೇಳಿ ಸ್ಥಾಪಿತ ಸರ್ಕಾರಗಳು ಹೆಣ್ಣು ಮಕ್ಕಳಿಗಾಗಿ ಹಲವಾರು ಸೌಲಭ್ಯಗಳನ್ನು ನೀಡಿವೆ ಎಂದು ಹೇಳಬಹುದು.

**ಬಸವರಾಜ.ಟಿ.ಎಂ**

**ಕನ್ನಡ ಭಾಷಾ ಶಿಕ್ಷಕರು**

**ಸರ್ಕಾರಿ ಪ್ರೌಢಶಾಲೆ, ರೂಪನಗುಡಿ ಬಳ್ಳಾರಿ ಜಿಲ್ಲೆ.**